# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಹಂಪಿ ಟೈಮ್ಸ್ HAMPI TIMES Kannada Daily
BOOK SPACE as your requirement
Special Offer Just For You!
Special Discount And Free Creative Support
SPECIAL OFFER
www.hampitimes.com epaper.hampitimes.com
CALL US : 9448633038
Email us Your Advertisement Content to : hampitimes@gmail.com





ಸಂಪುಟ:01 • ಸಂಚಿಕೆ:222 • ನೋಂದಣಿ ನಂ.:KARKAN27911 • ವಿಜಯನಗರ • 28.01.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:222 • Reg.No:KARKAN27911 • VIJAYANAGARA • 28.01.2024 • Sunday • Page:04 • Rs:2



ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಸಮಸ್ತ ರೈತರಿಗೆ ದಸರ ಹಾಗೂ ದೀಪಾವಳಿ ಹಬ್ಬಕ್ಕೆ ಸಹಕಾರ ನಿಡಿದ್ದಕ್ಕಾಗಿ ತುಂಬು ಹೃದಯದ ಧನ್ಯವಾದಗಳು

MASSEY FERGUSON
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
TAFE






*ಟಿ.ಪಿ., ಇನ್ಸುರೆನ್ಸ್, ರಿಜಿಸ್ಟ್ರೇಶನ್ ಉಚಿತ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
ವಿಜಯಶ್ರೀ ಮೋಟಾರ್ಸ್ ಟ್ರ್ಯಾಕ್ಟರ್ ವಿಭಾಗ
ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ-583239.
RRR GROUP
ಮೊ : 9980127607, 7353306719
*ಷರತ್ತುಗಳು ಅನ್ವಯಿಸುತ್ತವೆ

ರೈತರ ಕೋರಿಕೆಯ ಮೇರೆಗೆ ಈ ಸ್ಕೀಂ ಇನ್ನೂ 25 ಗ್ರಾಹಕರಿಗೆ ಮಾತ್ರ ವಿಸ್ತರಿಸಲಾಗುವುದು (ಮೊದಲು ಬಂದವರಿಗೆ ಆದ್ಯತೆ)


**ಮೈಕ್ರೋ ನ್ಯೂಸ್**

## ಹಂಪಿ ಉತ್ಸವ: ಫೆ.3ರಂದು ಬಂಡಿಗಾಲು ತೊಡಿಸುವ ಸ್ಪರ್ಧೆ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ರ ಪ್ರಯುಕ್ತ ಫೆ.03ರ ಬೆಳಗ್ಗೆ 10 ಗಂಟೆಗೆ ವಿಜಯ ವಿದ್ಯಾರಣ ಪ್ರೌಢಶಾಲೆ ಮೈದಾನ ಹೊಸ ಮಲಪನಗುಡಿಯಲ್ಲಿ ಬಂಡಿಗಾಲು ತೊಡಿಸುವ ಸ್ಪರ್ಧೆ ನಡೆಯಲಿದೆ.

ಈ ಸ್ಪರ್ಧೆಗೆ ಭಾಗವಹಿಸುವ ಸ್ಪರ್ಧಾಳುಗಳು ಫೆ.03ರ ಬೆಳಗ್ಗೆ 08 ರಿಂದ 10 ಗಂಟೆಯೊಳಗೆ ತಮ್ಮ ಹೆಸರು ನೋಂದಾಯಿಸಬೇಕು. ಅಭ್ಯರ್ಥಿಗಳಿಗೆ ಪ್ರಥಮ ದ್ವಿತೀಯ ಮತ್ತು ತೃತೀಯ ಬಹುಮಾನ ನೀಡಲಾಗುತ್ತದೆ. ಆಸಕ್ತ ಸ್ಪರ್ಧಾಗಳು ತಮ್ಮ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಬುಕ್ ಝುರಾಕ್ಸ್ ಪ್ರತಿಯೊಂದಿಗೆ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9972552385, 9164693882, 9483480101 ಗೆ ಸಂಪರ್ಕಿಸಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಸ್ಪರ್ಧೆಯಲ್ಲಿ ವಿಜಯನಗರ ಜಿಲ್ಲೆಯವರು ಭಾಗವಹಿಸಬೇಕು. ಸಮಯದ ಆಧಾರದ ಮೇಲೆ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ನೀಡಲಾಗುವುದು. ಬಂಡಿಯ ಎರಡು ಗಾಲಿಗಳನ್ನು ಹೊರತೆಗೆದು ಪುನಃ ಜೋಡಿಸಬೇಕು. ನಿರ್ಣಾಯಕರು ನಿರ್ದೇಶನ ನೀಡದ ನಂತರವೇ ತಮ್ಮ ಪ್ರಕ್ರಿಯೆಯನ್ನು ನಿಲ್ಲಿಸಬೇಕು. ನಿರ್ಣಾಯಕರ ತೀರ್ಪು ಅಂತಿಮವಾಗಿರುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಧ್ವನಿ ಬೆಳಕಿನಲ್ಲಿ ವಿಜಯನಗರ ವೈಭವ

### ಹಂಪಿ ಗಜಾಶಾಲೆ ಆವರಣದಲ್ಲಿ ಏಳು ದಿನ ಸಾಮ್ರಾಜ್ಯದ ಗತವೈಭವದ ಪರಿಚಯ । 25ನೇ ಬಾರಿ ಶ್ರೀಕೃಷ್ಣದೇವರಾಯ ಪಾತ್ರದಲ್ಲಿ ಚಂದ್ರಶೇಖರ ಶಾಸ್ತ್ರಿ ಫೆ.2 ರಿಂದ 8ವರೆಗೆ ರಾತ್ರಿ 7ರಿಂದ ಪ್ರಾರಂಭ । ನಟ ವಿಷ್ಣುವರ್ಧನ ಸೇರಿದಂತೆ ಅನೇಕ ಸಿನಿ ತಾರೆಯರ ಇಂಪಾದ ಹಿನ್ನೆಲೆ ಧ್ವನಿಯಲ್ಲಿ ಮೊಳಗಲಿದೆ

**■ ಬಸಾಪುರ ಬಸವರಾಜ್**
**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಇಂದಿನ ಜನತೆಗೆ ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಮೂಲಕ ಉಣಬಡಿಸಿದರೆ ಮಾತ್ರ ಹಂಪಿ ಉತ್ಸವ ಅರ್ಥಪೂರ್ಣ ಎನ್ನುವಷ್ಟರ ಮಟ್ಟಿಗೆ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಈ ಭಾಗದ ಜನರ ಮೇಲೆ ಪ್ರಭಾವ ಬೀರಿದೆ. ಈ ಬಾರಿ ಬರಗಾಲ ಹಿನ್ನೆಲೆಯಲ್ಲಿ ಉತ್ಸವದ ದಿನಾಂಕ ತಡವಾಗಿ ಘೋಷಣೆಯಾಗಿದ್ದರೂ, ಅನೇಕ ತಾಂತ್ರಿಕ ತೊಡಕುಗಳ ನಡುವೆಯೂ ಜಿಲ್ಲಾಧಿಕಾರಿಗಳು ಹೆಚ್ಚಿನ ಮುತುವರ್ಜಿವಹಿಸಿ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ಆಯೋಜನೆಗೆ ಮುಂದಾಗಿರುವುದು ಕಲಾವಿದರು ಮತ್ತು ಪ್ರೇಕ್ಷಕರಿಗೆ ಸಂತಸವನ್ನುಂಟು ಮಾಡಿದೆ.

**ಧ್ವನಿ ಮತ್ತು ಬೆಳಕಿನ ವೈಶಿಷ್ಟ್ಯ**

ವಿಶ್ವವಿಖ್ಯಾತ ಹಂಪಿ ಮತ್ತು ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಕಣ್ಣಿಗೆ ಕಟ್ಟುವಂತೆ ಧ್ವನಿ ಮತ್ತು ಬೆಳಕಿನಲ್ಲಿ ಪ್ರದರ್ಶಿಸಲಾಗುತ್ತದೆ. 125 ಕಲಾವಿದರು, ಜೀವಂತ ಆನೆ, ಕುದುರೆಯನ್ನು ಬಳಸಿಕೊಂಡು ನೈಜ ಪ್ರದರ್ಶನದೊಂದಿಗೆ ವಿಜಯನಗರ ಸಾಮ್ರಾಜ್ಯದ ಉಗಮ, ಉತ್ತುಂಗದ ಸ್ಥಿತಿ ಹಾಗೂ ಅವನತಿಯನ್ನು






ಸುಮಾರು ಎರಡೂವರೆ ಗಂಟೆಗಳ ಕಾಲ ಪ್ರೇಕ್ಷಕರಿಗೆ ರಸದೌತಣವನ್ನು ಉಣಬಡಿಸುತ್ತಾರೆ.

ಮೂರು ದಿನಗಳ ಹಂಪಿ ಉತ್ಸವ ಮುಗಿದರೂ, ನಿರಂತರ 7 ದಿನಗಳ ಕಾಲ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ನಡೆಯುತ್ತದೆ. ಇಲ್ಲಿನ ಆನೆಲಾಯದ ಪ್ರಾಂಗಣದಲ್ಲಿ ಸುಮಾರು 10 ರಿಂದ 12 ಕಿರು ವೇದಿಕೆಗಳಲ್ಲಿ ನೂರಕ್ಕೂ ಅಧಿಕ ಕಲಾವಿದರು ಪ್ರತ್ಯೇಕ ಸನ್ನಿವೇಶಗಳಿಗೆ ಜೀವ ತುಂಬುವರು. ಶ್ರೀಕೃಷ್ಣ ದೇವರಾಯರ ಪಟ್ಟಾಭಿಷೇಕ, ರಥಬೀದಿಯಲ್ಲಿ ವಜ್ರವೈಡೂರ್ಯಗಳ ಸಂತೆಯ ಸನ್ನಿವೇಶಗಳು ಕಣ್ಣಿಗೆ ಹಬ್ಬ. ಹಂಪಿ ಉತ್ಸವದ ಧ್ವನಿ ಮತ್ತು ಬೆಳಕು ಕಾರ್ಯಕ್ರಮ ವೀಕ್ಷಿಸಲೆಂದೇ ಪ್ರತಿ ನಿತ್ಯ ಸಾವಿರಾರು ಜನರು ಆಗಮಿಸುತ್ತಾರೆ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಣ್ತುಂಬಿಕೊಳ್ಳುವುದು ಇಲ್ಲಿನ ವಿಶೇಷ.

**ಪ್ರದರ್ಶನಕ್ಕಿದೆ ದಶಕಗಳ ಹಿನ್ನೆಲೆ**

ನಾಡಿನ ಐತಿಹ್ಯವನ್ನು ಪರಿಚಯಿಸುವ ಉದ್ದೇಶದಿಂದ ಸರ್ಕಾರ 1970ರಲ್ಲಿ ಮೊದಲ ಬಾರಿಗೆ ಕಮಲ ಮಹಲ್‌ನಲ್ಲಿ ಉತ್ಸವವನ್ನು ಆಯೋಜಿಸಲಾಗಿತ್ತು. ಆದರೆ, ಎಂ.ಪಿ.ಪ್ರಕಾಶ್ ಅವರು ಮುತುವರ್ಜಿ ವಹಿಸಿದ್ದರಿಂದ 1996 ರಿಂದ ಹಂಪಿ ಉತ್ಸವದಲ್ಲಿ ಧ್ವನಿ ಮತ್ತು ಬೆಳಕಿನ ಕಾರ್ಯಕ್ರಮ ಪ್ರದರ್ಶನ ಆರಂಭಿಸಿದರು. ಅಂದಿನಿಂದ ನಿರಂತರವಾಗಿದ್ದು, ಬರ, ನೆರೆ, ಕೋವಿಡ್ ಕಾರಣದಿಂದ ಉತ್ಸವ ರದ್ದಾಗಿದ್ದು, ತರಾತುರಿಯಲ್ಲಿ ಉತ್ಸವ ಆಯೋಜಿಸಿದಾಗ ಮಾತ್ರ ಧ್ವನಿ ಮತ್ತು ಬೆಳಕಿನ ಕಾರ್ಯಕ್ರಮ ರದ್ದಾಗಿದೆ. ಅಲ್ಲದೇ, ಧ್ವನಿ ಬೆಳಕು ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದ ನಾಟಕ ಅಕಾಡೆಮಿಯಿಂದ ಅನುಮತಿ ಪಡೆದಾಗ ಮಾತ್ರ, ಅದಕ್ಕೆ ಅಗತ್ಯವಿರುವ ಬೆಳಕು, ಧ್ವನಿ ಸಂಯೋಜಿತ ತಂತ್ರಜ್ಞಾನದ ಪರಿಕರಗಳನ್ನು ಒದಗಿಸಲಾಗುತ್ತದೆ. ಹೀಗಾಗಿ ಉತ್ಸವಕ್ಕೂ ಒಂದು ತಿಂಗಳ ಮುನ್ನ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ ಕಡ್ಡಾಯ. ಇಷ್ಟೆಲ್ಲಾ ಷರತ್ತುಗಳ ನಡುವೆಯೂ ಈಬಾರಿ ಹಂಪಿ ಉತ್ಸವವನ್ನು ಜನೋತ್ಸವವನ್ನಾಗಿ ಮಾಡಬೇಕೆಂಬ ಉತ್ಸುಕತೆಯಿಂದ ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಳ್ಳುತ್ತಿದೆ. ಈಗಾಗಲೆ ಕಲಾವಿದರ ಆಯ್ಕೆ ಪೂರ್ಣಗೊಂಡಿದೆ. ಏಳುದಿನಗಳ ನಡೆಯುತ್ತಿದ್ದ ರಿಹರ್ಸಲ್ ತರಬೇತಿ ಈ ಬಾರಿ ಆರು ದಿನಕ್ಕಿಳಿದಿದೆ. ಈಗಾಗಲೇ ಕೇಂದ್ರ ಸರ್ಕಾರದ ನಾಟಕ ಅಕಾಡೆಮಿಯಿಂದ ದೆಹಲಿ, ಹೈದರಾಬಾದ್, ಚೆನ್ನೈ, ಪುಣೆ ಹಾಗೂ ಬೆಂಗಳೂರು ಕೇಂದ್ರಗಳಿಂದ ತಂತ್ರಜ್ಞರು ಪರಿಕರಗಳೊಂದಿಗೆ ಬಂದಿಳಿದಿದ್ದು, ಅಕಾಡೆಮಿಯ ಹೆಚ್ಚುವರಿ ಮಹಾನಿರ್ದೇಶಕ ಎಸ್.ಜಿ.ರವೀಂದ್ರ ನೇತೃತ್ವದಲ್ಲಿ ಸಿದ್ಧತೆ ಜೋರಾಗಿ ನಡೆದಿದೆ. ಧ್ವನಿ ಬೆಳಕು ಈ ಬಾರಿ ಇದೆಯೋ ಇಲ್ಲವೋ ಎಂಬ ಆತಂಕವನ್ನು ಜಿಲ್ಲಾಡಳಿತ ದೂರಾಗಿಸಿದ್ದು, ಆಕರ್ಷಕ ಧ್ವನಿ ಬೆಳಕಿನ ಮೂಲಕ ಇತಿಹಾಸ ಉಣಬಡಿಸಲಿದೆ.

> ಹಂಪಿ ಉತ್ಸವಕ್ಕೆ ಬೆಂಗಳೂರು, ದೆಹಲಿ, ಪುಣೆ, ಹೈದರಾಬಾದ ಹಾಗೂ ಚನ್ನೈ ವಿಭಾಗದ ಪ್ರಾದೇಶಿಕ ಜನಸಂಪರ್ಕ ಕಾರ್ಯಾಲಯದ ತಾಂತ್ರಿಕ ಪರಿಣಿತರ ತಂಡ ಸಿದ್ದತೆಯಲ್ಲಿ ತೊಡಗಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ನಮ್ಮ ಸೌಭಾಗ್ಯ.
> – ಎಸ್.ಜಿ. ರವೀಂದ್ರ, ಹೆಚ್ಚುವರಿ ಮಹಾನಿರ್ದೇಶಕರು, ಕೇಂದ್ರ ಸಂವಹನ ಇಲಾಖೆ, ಬೆಂಗಳೂರು.



> ವಿಜಯನಗರ ಸಾಮ್ರಾಜ್ಯದ ಸಾಮ್ರಾಜ್ಯದ ಉದಯ, ಆಡಳಿತ, ಸಂಸ್ಕಾರ, ಐಕ್ಯತೆ, ಕಲೆ, ಸಂಸ್ಕೃತಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ವ್ಯಾಪಾರ, ಸಾಮ್ರಾಜ್ಯದ ವಿಸ್ತಾರ, ಮತ್ತು ಅವನತಿಯ ಹಿನ್ನೋಟವನ್ನು ಸಾರುವ ಧ್ವನಿ ಬೆಳಕು ಕಾರ್ಯಕ್ರಮವನ್ನು ಎರಡೂವರೆ ಗಂಟೆಗಳಲ್ಲಿ ಕಣ್ತುಂಬಿಕೊಳ್ಳುವ ಸದಾವಕಾಶ ಒದಗಿಸಲಾಗಿದ್ದು, ಪ್ರತಿಯೊಬ್ಬರೂ ವೀಕ್ಷಿಸಿ ಇತಿಹಾಸ ತಿಳಿದುಕೊಳ್ಳಬೇಕು.
> – ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿಗಳು.

# ಕವಿತಾಸಿಂಗ್ ಸಾಧನೆಗೆ ಜನಮೆಚ್ಚುಗೆ

### ತಾಯಮ್ಮ ಶಕ್ತಿ ಸಂಘದ ದಶಮಾನೋತ್ಸವದಲ್ಲಿ ಸಾಧಕರಿಗೆ ಸನ್ಮಾನ



**■ ಹಂಪಿ ಟೈಮ್ಸ್ ಹೊಸಪೇಟೆ**

ಮಹಿಳೆಯರ ಸಬಲೀಕರಣಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳ ಸೌಲಭ್ಯ ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂದು ಎಂದು ಕವಿತಾಈಶ್ವರ್ ಸಿಂಗ್ ಹೇಳಿದರು.

ನಗರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ತಾಯಮ್ಮ ಶಕ್ತಿ ಸಂಘದ ದಶಮಾನೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಸಾಧಕರಿಗೆ ಸನ್ಮಾನ ಹಾಗೂ ವಾಟರ್ ಟ್ಯಾಂಕ್ ವಿತರಣೆ ಸಮಾರಂಭದಲ್ಲಿ ಮಾತನಾಡಿದರು. ಜೀವನದಲ್ಲಿ ಅನೇಕ ಸವಾಲುಗಳನ್ನು ಮೆಟ್ಟಿ ನಿಂತಾಗ ಮಾತ್ರ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯ. ಬಡತನಕ್ಕೆ ಅಂಜಬೇಕಿಲ್ಲ. ಮಾಡುವ ಕೆಲಸದಲ್ಲಿ ನಿರಂತರ ಇಚ್ಛಾಶಕ್ತಿ ಬೆಳೆಸಿಕೊಂಡರೆ ನಿರೀಕ್ಷಿತ ಗುರಿ ತಲುಪಬಹುದು. ಮಹಿಳೆಯರ ಆರ್ಥಿಕ ಬಲವರ್ಧನೆಗಾಗಿ ತಾಯಮ್ಮ ಶಕ್ತಿ ಸಂಘ ಅನೇಕ ಯೋಜನೆಗಳನ್ನು ರೂಪಿಸಿದೆ. ಶೀಘ್ರದಲ್ಲೆ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದರು.

ಕಾರ್ಯದರ್ಶಿ ಪಿ.ರಾಘವೇಂದ್ರ ಪ್ರಾಸ್ತಾವಿಕ ವಾಗಿ ಮಾತನಾಡಿ, ತಾಯಮ್ಮ ಶಕ್ತಿ ಸಂಘ ಕಳೆದ ಹತ್ತು ವರ್ಷಗಳಲ್ಲಿ ಹೊಲಿಗೆ ತರಬೇತಿ, ಉಚಿತ ಹೊಲಿಗೆ ಯಂತ್ರ, ಕರೋನ ಸಂಧರ್ಭದಲ್ಲಿ ಮನೆ ಮನೆಗೆ ಆಹಾರದ ಕಿಟ್ ವಿತರಣೆ, ಪೌರಕಾರ್ಮಿಕರಿಗೆ ಅರೋಗ್ಯ ಕಿಟ್, ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್, ಮಹಿಳೆಯರು ಬ್ಯಾಂಕಿಂಗ್ ಸೌಲಭ್ಯ ಪಡೆಯಲು ನೆರವು ನೀಡಿದ್ದಾರೆ. ಎಂದರು. ದಶಕದ ಸಾಧನೆಯ ಹಿನ್ನೋಟವನ್ನು ಡಿಜಿಟಲ್ ಪರದೆ ಮೇಲೆ ಬಿತ್ತರಿಸಿದರು.

ಮುಖ್ಯ ಅತಿಥಿಗಳಾಗಿ ನಗರಸಭಾಧ್ಯಕ್ಷೆ ಲತಾ, ಕ.ರ.ವೇ. ಅದ್ಯಕ್ಷ ತಾರಿಹಳ್ಳಿ ಹನುಮಂತಪ್ಪ, ಭಾಗ್ಯಲಕ್ಷ್ಮಿ ಭರಾಡೆ, ಭಾರತೀಯ ವಿಕಾಸ ಪರಿಷತ್ತಿನ ರೇವಣ ಸಿದ್ದಪ್ಪ, ಟಿಂಕರ್ ರಫೀಕ್, ವೆಂಕನಗೌಡ್ರು, ಸಾಲಿ ಸಿದ್ದಯ್ಯಸ್ವಾಮಿ, ಉಮಾಪತಿ, ರೋಟರಿ ಕ್ಲಬ್ ನ ನೀತಾ ಪಾಟೀಲ್, ಮಂಗಳ ಅರ್, ಅಪರ ಸರ್ಕಾರಿ ವಕೀಲರಾದ ಪಿ.ನಾಗಭೂಷಣ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು.

ಸಾವಯುವ ಕೃಷಿವಿಭಾಗದಲ್ಲಿ , ಪಿ.ನಾಗರಾಜ್, ಸಖಿ ಸಂಸ್ಥೆಯ ಭಾಗ್ಯ, ಪೌರಕಾರ್ಮಿಕರಾದ ವೆಂಕಮ್ಮ, ಲಕ್ಷ್ಮಮ್ಮ, ಕ್ರೀಡಾವಿಭಾದಲ್ಲಿ ಕುಸ್ತಿ ಪಟು. ಪ್ರಭುನಾಯಕ , ಹೆಚ್.ಮಹೇಶ (ವಕೀಲರು), ಪತ್ರಿಕಾ ವಿಭಾಗದಲ್ಲಿ ಕರ್ನಾಟಕ ಪತ್ರಕರ್ತರ ಸಂಘದ ವಿಜಯನಗರ ಜಿಲ್ಲೆಯ ಜಿಲ್ಲಾದ್ಯಕ್ಷ ರಾಜು ಬಿ.ಹೆಚ್.ಎಸ್., ಹೊಸಪೇಟೆ ಟೈಮ್ಸ್ ಸಂಪಾದಕಿ ರೇಖಾ ಪ್ರಕಾಶ, ಹಾಯ್ ಮಿಂಚು ಪತ್ರಿಕೆಯ ಉಪಸಂಪಾದಕಿ ಗೀತಾಸುರೇಶ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಬಸವರಾಜ ಸರ್ಕಾರಿ ವೈದ್ಯ ಮತ್ತು ಡಾ.ಮೆಹಬೂಬಿ, ಶಿಕ್ಷಣಕ್ಷೇತ್ರದ ಹನುಮಕ್ಕ, ಸಾಹಿತ್ಯ ಕ್ಷೇತ್ರದಲ್ಲಿ ಪಿ.ರಾಘವೇಂದ್ರ ಉಪನ್ಯಾಸಕರು ಮತ್ತು ಡಿ.ಪೂರ್ಣಿಮ, ನಿರೂಪಕಿ ಜ್ಯೋತಿ, ಕನ್ನಡ ವಿ.ವಿ ಹಂಪಿ, ಯಮುನಾ ಕುಲಕರ್ಣಿ >>4

# ಹೊಳಗುಂದಿ ಸಿದ್ದೇಶ್ವರ ಸ್ವಾಮಿ ರಥೋತ್ಸವ



**■ ಹಂಪಿ ಟೈಮ್ಸ್ ಹೂವಿನಹಡಗಲಿ**

ತಾಲ್ಲೂಕಿನ ಹೊಳಗುಂದಿ ಗ್ರಾಮದ ಸಿದ್ದೇಶ್ವರ ಸ್ವಾಮಿಯ ಜಾತ್ರೆಯ ನಿಮಿತ್ತ ಶನಿವಾರ ಬೆಳಿಗ್ಗೆ 11.30ಕ್ಕೆಸಾವಿರಾರು ಭಕ್ತರ ನಡುವೆ ಸಂಭ್ರಮದಿಂದ ಪ್ರಸನ್ನಗೊಂಡಿತು.

ಉತ್ಸವ ಅಂಗವಾಗಿ ದೇವಸ್ಥಾನ ದಲ್ಲಿ ಬೆಳಿಗ್ಗೆ ಯಿಂದಲೇ ವಿಶೇಷ ಪೂಜೆಯನ್ನು ನೆರವೇರಿತು. ಶುಕ್ರವಾರ ರಾತ್ರಿ ದೇವಸ್ಥಾನ ಮುಂಬಾಗ ಕೆರೆ ಮೈದಾನದಲ್ಲಿ ಅಗ್ನಿ ಪ್ರಜ್ವಲನ ಮಾಡಲಾಯಿತು. ಶನಿವಾರ ಅಗ್ನಿ ಮಹೋತ್ಸವ ವಿಜ್ರಂಭಣೆಯಿಂದ ನೆರವೇರಿತು. ಇದಕ್ಕೂ ಮೊದಲು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಿದ್ದೇಶ್ವರ ಸ್ವಾಮಿ ಯ ಉತ್ಸವ ಮೂರ್ತಿಯನ್ನು ಹೂವಿನಿಂದ ಸಿಂಗರಗೊಂಡಿದ್ದ ಪಲ್ಲಕ್ಕಿ ಯಲ್ಲಿ ಸಂಚರಿಸಿ ಅಗ್ನಿ ಹಾಯುವ ಮೂಲಕ ದೇವಸ್ಥಾನ ತಲುಪಿತು. ಮಾರ್ಗ ಮದ್ಯ ಮೆರವಣಿಗೆಯಲ್ಲಿ ವೇಷ ಭೂಷಣದೊಂದಿಗೆ ಪುರವಂತರು .ನವಿಲು ಕುಣಿತ ಕಲಾವಿದರು ತಮ್ಮ ಪ್ರದರ್ಶಿ ತಮ್ಮಭಕ್ತಿಯನ್ನು ಮೆರೆದರು. ಇನ್ನು ಕೆಲವರು 200ಅಡಿ ಉದ್ದದ ಹಗ್ಗವನ್ನು ಕೆನ್ನೆಯ ಮೂಲಕ ಹೊರ ತೆಗೆದು ಭಕ್ತಿ ಯನ್ನು ಸಮರ್ಪಿಸಿದರು. ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅಗ್ನಿ ಪ್ರವೇಶ ಕಾರ್ಯ ಕ್ರಮ ಸಂಭ್ರಮದಿಂದ ನಡೆದು ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಯೊಂದಿಗೆ ಜಾತ್ರೆ ಸಂಪನ್ನಗೊಂಡಿತು.




HAMPI TIMES VIJAYANAGARA
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ





ನಿಮ್ಮ ಹಂಪಿ ಪ್ರವಾಸ ಅನುಭವ

ನೀವು ಹಂಪಿಗೆ ಭೇಟಿ ನೀಡಿದ್ದೀರಾ? ಈ ಹಿಂದೆ ಹಂಪಿ ಹೇಗಿತ್ತು, ಈಗ ಹೇಗಾಗಿದೆ, ಮುಂದೆ ಏನೆಲ್ಲಾ ಸೌಲಭ್ಯಗಳು ಪ್ರವಾಸಿಗರಾಗಿ ನೀವು ನಿರೀಕ್ಷಿಸುತ್ತೀರಿ?
ನಿಮ್ಮದೆ ಅಭಿಪ್ರಾಯಗಳನ್ನು ಕಳುಹಿಸಿ, ಹಂಪಿ ಟೈಮ್ಸ್ ಮೂಲಕ ಸಂಬಂಧಿಸಿದ ಅಧಿಕಾರಿಗಳ ಗಮನ ಸೆಳೆಯಿರಿ.

ಹಂಪಿ ಪ್ರವಾಸೋದ್ಯಮ ಅಭಿವೃದ್ಧಿಗೆ ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವುದರೊಂದಿಗೆ ಪ್ರವಾಸೋದ್ಯಮ ಪ್ರಗತಿಗೆ ಸಹಕರಿಸಿ.
ನಿಮ್ಮ ಅಭಿಪ್ರಾಯದೊಂದಿಗೆ ಹಂಪಿಗೆ ಭೇಟಿ ನೀಡಿದ ಕ್ಷಣದ ನಿಮ್ಮ ಫೋಟೊ ಇರಲಿ. ನಿಮ್ಮ ಅಭಿಪ್ರಾಯಗಳನ್ನು ಈ ಕೆಳಗಿನ ಇ-ಮೇಲ್/ ವಾಟ್ಸಪ್‌ಗೆ ಕಳುಹಿಸಿರಿ.

www.hampitimes.com
epaper.hampitimes.com
hampitimes@gmail.com
@hampitimes





9448633038

ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಅಯೋಧ್ಯೆ ರಾಮಮಂದಿರ ದೇಶದಲ್ಲಿ ಭಕ್ತರ ಸಡಗರ



ಭಾರತವರ್ಷವೇ ಅಲ್ಲದೆ, ಇಡೀ ಜಗತ್ತಿನಾದ್ಯಂತ ಇರುವ ರಾಮಭಕ್ತರ ನಿರೀಕ್ಷೆ, ಸಂತಸ, ಸಂಭ್ರಮ ಈಗ ಬಾಲರಾಮ ಮೂರ್ತಿ ಪ್ರಾಣಪ್ರತಿಷ್ಠಾಪನೆ ಮೂಲಕ ಈಡೇರಿದೆ. ಈ ಬಯಕೆ ನಿನ್ನೆ–ಮೊನ್ನೆಯದಲ್ಲ. ಶತಶತಮಾನಗಳ ಹೋರಾಟದ ಪ್ರತೀಕ. ಕೋಟಿ ಕೋಟಿ ಜನರ ಹೆಬ್ಬಯಕೆ ಈ ಪವಿತ್ರ ಅಯೋಧ್ಯೆ. ಅಯೋಧ್ಯೆಯಲ್ಲಿ ಬಾಲರಾಮ ಬೃಹತ್ ದೇವಸ್ಥಾನ ಉದ್ಘಾಟನೆ ನೆರವೇರಿಸುವ ಮಹಾ ಅದೃಷ್ಟ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಒಲಿದು ಬಂದಿದೆ. ಇದು ಅವರ ಹಲವು ಜನ್ಮಗಳ ಹಿಂದಿನ ಪುಣ್ಯವೂ ಇದೆ ಎನಿಸುತ್ತದೆ. ಅವರ ಮೂಲಕ ಮಂದಿರದ ಉದ್ಘಾಟನೆ ಅದ್ದೂರಿಯಾಗಿ, ಸಂಪ್ರದಾಯ ಬದ್ಧವಾಗಿ, ಶ್ರೀಮಂತವಾಗಿ ನಡೆದಿದೆ. ಅಯೋಧ್ಯೆಯಲ್ಲಿ ಬಾಲರಾಮ ಮಂದಿರ ಎಂಬುದು ಕೇವಲ ಭಕ್ತಿಯ ಕೇಂದ್ರವಾಗಿ ಈಗ ಉಳಿದಿಲ್ಲ. ಭಕ್ತಿಯೊಂದಿಗೆ ಸಮರ್ಪಣೆ, ರಾಷ್ಟ್ರಧರ್ಮದ ಮೌಲ್ಯಗಳು, ಭಾರತದ ಗೌರವದೊಂದಿಗೆ ದೇಶದ ಪ್ರತಿ ಮನುಷ್ಯನ ಹೆಮ್ಮೆಯಾಗಿ ಪರಿಣಮಿಸಿದೆ. ರಾಮ ಮಂದಿರ ನಿರ್ಮಾಣದ ಮೂಲಕ ಇಡೀ ಭಾರತದ ಇತಿಹಾಸದಲ್ಲಿ ಮತ್ತೊಂದು ಹೊಸ ಪರ್ವ ಶುರುವಾಗಿದೆ ಎಂದರೆ ತಪ್ಪೇನಿಲ್ಲ. ಶತಶತಮಾನಗಳ ಸುದೀರ್ಘ ಹೋರಾಟ ಈಗ ಸಾಕಾರಗೊಂಡಿದೆ. ಅಂದರೆ, ಹೋರಾಟಗಾರರ ಮತ್ತು ದೇಶದ ಸ್ವಾಭಿಮಾನಕ್ಕೆ ದೊರೆತ ವಿಜಯ ಎಂದೇ ಹೇಳಬಹುದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಬಾಲರಾಮ ಮಂದಿರವು ರಾಷ್ಟ್ರಮಂದಿರವೇ ಆಗಿಹೋಗಿದೆ. ದೇಶವು ಈಗ ದೇವಸ್ಥಾನ ಉದ್ಘಾಟನೆಯಾದ ಸಂಭ್ರಮದಲ್ಲಿದ್ದು, ಭಾರತ ಏಕತೆ ಪ್ರದರ್ಶನವಾದಂತಾಗಿದೆ. ರಾಮಲಲ್ಲಾ ದೇಗುಲ ಉದ್ಘಾಟನೆ ಸುವರ್ಣ ಅಕ್ಷರಗಳಲ್ಲಿ ಬರೆದಿಡುವಂಥ ವಿಚಾರ. ಈ ದೇಗುಲವು ಸಂಭ್ರಮದ ಜತೆಜತೆಗೆ ಸೌಹಾರ್ದತೆ, ಸಾಮರಸ್ಯ, ಸಹಬಾಳ್ವೆ, ಮಾನವೀಯತೆ, ಮೌಲ್ಯಗಳು, ಏಕತೆ, ಸ್ವಾಭಿಮಾನ, ಧರ್ಮ, ಹೆಮ್ಮೆಯ ಪ್ರತೀಕವಾಗಿ ಪ್ರತಿನಿಧಿಸುತ್ತಿದೆ. ಒಂದು ರೀತಿಯಲ್ಲಿ ಭಾರತದ ಆತ್ಮವೇ ರಾಮಮಂದಿರ ಎಂದೂ ಕರೆಯಬಹುದು. ಸಂಸ್ಕೃತಿಯ ಪ್ರತೀಕವಾದ ಈ ದೇವಸ್ಥಾನದ ಮೂಲಕ ಭಾರತ ದೇಶವು ನಮ್ಮ ಮಣ್ಣಿನ ಪರಂಪರೆ ಮೂಲಕ ವೈಭವದಲ್ಲಿ ತೇಲಾಡುತ್ತಿದೆ. ಅಯೋಧ್ಯೆಯಲ್ಲಿರುವ ಈ ರಾಮಮಂದಿರವು ಭವಿಷ್ಯದ ದಿನಗಳಲ್ಲಿ ಜಾಗತಿಕ ಧಾರ್ಮಿಕ, ಪ್ರವಾಸೋದ್ಯಮ ತಾಣವಾಗಿ ಮತ್ತಷ್ಟು ಬೆಳೆಯುವುದರಲ್ಲಿ ಸಂಶಯವಿಲ್ಲ. ಪಿತೃವಾಕ್ಯ ಪರಿಪಾಲಕ, ಮರ್ಯಾದಾ ಪುರುಷೋತ್ತಮ ಎಂದು ಕರೆಯಲ್ಪಡುವ ಶ್ರೀರಾಮಚಂದ್ರನು ದೇಶದ ನಿವಾಸಿಗಳನ್ನು ಮತ್ತು ಜಗದಗಲ ವಾಸಿಸುತ್ತಿರುವ ಎಲ್ಲರನ್ನೂ ಬೆಸೆಯುವ ರಾಮಸೇತು ಆಗಿದ್ದಾನೆ. ಸಂಸ್ಕೃತಿಯ ಮತ್ತೊಂದು ಮುಖವಾಗಿ ಬಿಂಬಿತವಾಗಿರುವ ಈ ವೈಭವವುಳ್ಳ ಭವ್ಯ ದೇಗುಲವು ಆಧುನಿಕ ಮತ್ತು ಭವಿಷ್ಯದ ಭಾರತ ನೆಲದ ಸಾಂಸ್ಕೃತಿಕ ಮುಖವಾಣಿಯಾಗಲಿದೆ. ಶ್ರೀಮಂತರಿಂದ ಹಿಡಿದು ಬಡವನವರೆಗೆ ಎಲ್ಲರ ಆಶೋತ್ತರಗಳನ್ನು ಈಡೇರಿಸುವ, ಭಕ್ತರ ಅಪೇಕ್ಷೆಗಳನ್ನು ಕರುಣಿಸುವ ದೇವನಾಗಿ ಮತ್ತೊಮ್ಮೆ ಅಯೋಧ್ಯೆಯಲ್ಲಿ ವಿರಾಜಮಾನರಾಗಿದ್ದಾನೆ. ಲಕ್ಷಾಂತರ ಹೋರಾಟಗಾರರ ಶ್ರಮ ಮತ್ತು ಕೋಟ್ಯಂತರ ಭಕ್ತರ ಆಸೆ–ಅಭಿಲಾಷೆ ಈಗ ಸಾಕಾರಗೊಂಡಿದೆ. ಈಗ ಮುಂದಿರುವ ನಡೆ ಏನೆಂದರೆ ಶ್ರೀರಾಮನ ಆದರ್ಶಗಳು ಎಲ್ಲರ ಜೀವನದಲ್ಲಿ ಮಿಳಿತವಾಗಬೇಕು. ರಾಮಾಯಣ ನಮಗೆ ಜೀವನವಾಗಬೇಕು. ರಾಮ ನಮಗೆ ಕೇವಲ ದೇವರಲ್ಲದೆ, ಆತನ ಆಡಳಿತ ಸರ್ಕಾರಗಳಿಗೆ ಮಾದರಿಯಾಗಬೇಕು. ಬಡವ–ಶ್ರೀಮಂತ, ಸಬಲ–ದುರ್ಬಲ, ಮೇಲು–ಕೀಳು ಎಂಬ ಅಡೆತಡೆಯಿಲ್ಲದೆ ಜನಸಾಮಾನ್ಯರ ಜೀವನ ಸಾಗಿಸುವಂತಾಗಬೇಕಾದರೆ ರಾಮನನ್ನು ಸರ್ಕಾರಗಳು ಅನುಸರಿಸಬೇಕು. ಒಟ್ಟಿನಲ್ಲಿ ಈ ಕಾಲಘಟ್ಟದಲ್ಲಿ ರಾಮಮಂದಿರ ಉದ್ಘಾಟನೆಯನ್ನು ಕಣ್ತುಂಬಿಕೊಂಡ ನಾವೇ ಧನ್ಯರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಹದಿ ಹರೆಯದ ಮಕ್ಕಳ ಅಂತರಾಳದ ತಳಮಳ ಅರಿತು ಕೊಂಡ(ರಷ್ಟೇ)ಷ್ಟೂ ನಿರಾಳ



ಇದೊಂದು ರಿತಿಯಲ್ಲಿ ಬಿಸಿ ತುಪ್ಪದ ಹಾಗೆ ಅತ್ತ ಉಗಳಲೂ ಆಗದ ಇತ್ತ ನುಂಗಲೂ ಆಗದ ಸ್ಥಿತಿ, ಈ ಹದಿ ಹರೆಯದ ಮಕ್ಕಳ ಮನಸ್ಸಿನಲ್ಲಿ ಏನು ನೆಡೆಯುತ್ತದೆ ಹಾಗೆಯೆ ಅವರ ತಲೆಯಲ್ಲಿ ಏನು ಓಡುತ್ತಿರುತ್ತದಯೋ ಆ ದೇವರೆ ಬಲ್ಲ. ಒಂದು ಮಾತು ಹೇಳಿದರೂ ತಪ್ಪು, ಹೇಳದಿದ್ದರೂ ತಪ್ಪೇ ಎನ್ನುವಂತಹ ಸ್ಥಿತಿಯ ಅನೇಕ ಪಾಲಕರನ್ನು ನಾವು ನೋಡುತ್ತೇವೆ ಇನ್ ಫ್ಯಾಕ್ಟ ಇಂತಹ ವಿಚಾರಗಳನ್ನು ಪಾಲಕರಾದ ನಾವು ನಮ್ಮ ಆಪ್ತ ವಲಯದಲ್ಲಿ ಹೇಳಿಕೊಂಡಿರುತ್ತೇವೆ. ಕಾರಣ ಇಷ್ಟೇ ಒಮ್ಮೆ ಮಕ್ಕಳು ಹದಿ ಹರೆಯಕ್ಕೆ ಕಾಲಿಡುವುದೇ ತಡ, ಅಪ್ಪ ಅದನ್ನೇ ಎಷ್ಟು ಬಾರಿ ಹೇಳುತ್ತೀಯಾ "ಅದು ನನಗೆ ಗೊತ್ತು" ಎನ್ನುವಂತೆ, ಇಲ್ಲವೆ ಸುಮ್ನಿರಮ್ಮ ನಿನಗೆಲ್ಲ ಇದು ತಿಳಿಯೋದಿಲ್ಲ ಎನ್ನುವ ಮಾತುಗಳನ್ನು ಕೇಳೇ ಇರುತ್ತೇವೆ. ಇತ್ತ ಪ್ರಬುದ್ಧರಂತೆ ಕಂಡರೂ ಅತ್ತಾ ಅವರ ವರ್ತನೆಯಲ್ಲಿನ ಅಪ್ರಬ್ಬುದ್ದತೆ ಮತ್ತು ಅತಿರೇಕದ ಪ್ರತಿಕ್ರಿಯನ್ನು ನೋಡುತ್ತೇವೆ ಮತ್ತು ಮಕ್ಕಳ ಇಂತಹ ವರ್ತನೆಗಳಿಂದ ಒಂದು ರೀತಿಯ ಮುಜುಗರವನ್ನು, ತಳಮಳವನ್ನು ಅನುಭವಿಸಬೇಕಾಗುತ್ತದೆ. ನಾವು ನೋಡಿದಂತೆ ಎಷ್ಟೋ ಮನೆಗಳಲ್ಲಿ ಈ "ಮಕ್ಕಳು ಹೇಳಿದ ಮಾತುನ್ನು ಎಂದಿಗೂ ಕೇಳುವುದಿಲ್ಲ" ಅನ್ನುವುದೇ ದೊಡ್ಡ ಸಮಸ್ಯೆ. "ಇಂತಹ ಸಮಯದಲ್ಲಿ ಎಲ್ಲಾ ಪಾಲಕರು ಹೇಳುವುದು ಒಂದೇ ಹೇಗೆಪ್ಪಾ ಇವರನ್ನು ನಿಭಾಯಿಸೋದು ಎಂದು ಪರಿ ಪರಿಯಾಗಿ ಪರಿತಪಿಸುತ್ತಿರುತ್ತಾರೆ.

ಸಹಜವಾಗಿ ಪೋಷಕರಾದ ಪ್ರತಿಯೊಬ್ಬರಿಗೂ ಮಕ್ಕಳ ಈ ರೀತಿಯ ವರ್ತನೆಯಿಂದಾಗಿ ಸಹಜ ಆತಂಕ, ದುಗುಡ ಮತ್ತು ಮನಸ್ಸಿನಲ್ಲಿ ಗೊಂದಲಗಳು ಉಂಟಾಗುವುದುನ್ನು ಕಾಣುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಅನಗತ್ಯವಾಗಿ ಪಾಲಕರು ಗಹನವಾಗಿ ಚಿಂತಿಸುವ ಅಗತ್ಯವಿಲ್ಲ ಆದರೆ ಸ್ವಲ್ಪ ನಿಮ್ಮನ್ನು ನೀವು ಚಿಂತನೆಗೆ ಹಚ್ಚಿಕೊಳ್ಳುವಂತಹ ಅವಶ್ಯಕತೆ ಇರುತ್ತದೆ ಅಷ್ಟೇ. ಏಕೆಂದರೆ ಆಗತಾನೆ ನಮ್ಮ ಮಕ್ಕಳು ಬಾಲ್ಯಾವಸ್ಥೆಯನ್ನು ಮುಗಿಸುತ್ತಾ "ಟೀನೇಜ್" (ಹದಿಹರೆಯದ ವಯಸ್ಸು) ಎನ್ನುವಂತಹ ಆರಂಭಕ್ಕೆ ಅಡಿಯಿಟ್ಟಿರುತ್ತಾರೆ. ಈ ಹಂತದಲ್ಲಿ ನಿಮ್ಮ ಮಕ್ಕಳಲ್ಲಿ ಕೆಲವು ಗಮನಾರ್ಹವಾದಂತಹ ಬದಲಾವಣೆಗಳನ್ನು ನಾವು ಗಮನಿಸುತ್ತೇವೆ, ಆ ಕಾರಣದಿಂದಾಗಿ ನಮ್ಮ ಮಕ್ಕಳ ವರ್ತನೆಯಲ್ಲಿ ಅತಿ ಎನಿಸುವಂತಹ ನಡವಳಿಕೆಗಳನ್ನು ಕಾಣುತ್ತೇವೆ ಮತ್ತು ಸಹಜವಾಗಿ ಆತಂಕಗೊಳ್ಳುತ್ತೇವೆ.

ಈ ಎಲ್ಲಾ ಬದಲಾವಣೆಗಳಿಗೆ ವೈಜ್ಞಾನಿಕ ಕಾರಣಗಳನ್ನು ನೋಡುವುದಾದರೆ, ನಮಗೆ ಕಂಡುಬರುವ ಮುಖ್ಯವಾದ ವಿಚಾರಗಳು ಎರಡು. 1–ಮಕ್ಕಳಲ್ಲಿನ ದೈಹಿಕ ಬದಲಾವಣೆ ಅಥವಾ ಬೆಳವಣಿಗೆ. 2–ಮಕ್ಕಳಲ್ಲಿನ ಮಾನಸಿಕ ಬೆಳವಣಿಗೆ, ಅಂದರೆ ಬುದ್ದಿಯ ಬೆಳವಣಿಗೆಯ ಮತ್ತು ದೈಹಿಕ ಬೆಳವಣಿಗೆ ನಡುವಿನ ಪ್ರಮಾಣದ ಅಂತರದಲ್ಲಿನ ವ್ಯತ್ಯಾಸದ ಪರಿಣಾಮದ ಫಲ ಇದಾಗಿರುತ್ತದೆ. ಏಕೆಂದರೆ ಸಹಜವಾಗಿ ಮನುಷ್ಯರ ಮೆದುಳಿನ ಬೇಳವಣಿಗೆಯ ಅವರ ದೈಹಿಕ ಬೆಳವಣಿಗೆಯ ಜೊತೆ ಜೊತೆಗೇ ಸಾಗುತ್ತಿದ್ದರೂ ಒಂದು ಹಂತದಲ್ಲಿ ಕೆಲವೊಂದು ಕ್ಷೇತ್ರಗಳಲ್ಲಿ ದೈಹಿಕ ಬೆಳವಣಿಗೆಯು ಭೌದ್ಧಿಕ ಬೇಳವಣಿಗೆಯನ್ನು ಪಾರು ಮಾಡಿಕೊಂಡು ಮುಂದೆ ಹೋಗುತ್ತದೆ. ಉದಾಹರಣೆಗೆ 12 ರಿಂದ 20 ವರ್ಷಗಳ ಬೆಳವಣಿಗೆಯ ಹಂತದಲ್ಲಿ ದೈಹಿಕವಾಗಿ ಮಕ್ಕಳ ಪ್ರಗತಿಯು ಸಾಕಷ್ಟು ಇದ್ದಾಗಲು ಭೌದ್ದಿಕವಾಗಿ ಇನ್ನೂ ಕೆಲವು ಆಯಾಮಗಳಾದಂತಹ ತರ್ಕ ಮತ್ತು ನಿರ್ಧಾರಗಳನ್ನು ಮಾಡುವಂತಹ ವಿಚಾರಗಳಲ್ಲಿ ಭೌದ್ದಿಕವಾಗಿ ಸ್ಪಷ್ಟತೆಯು ಬೇಕಾಗುತ್ತದೆ, ಹಾಗಾಗಿ ನಮ್ಮ ಮಕ್ಕಳು ದೈಹಿಕವಾಗಿ ಬೆಳೆದವರಂತೆ ಕಂಡರೂ ಭೌದ್ದಿಕ ವಿಚಾರಗಳಲ್ಲಿ ಇನ್ನೂ ಬೆಳವಣಿಗೆ ಮುಂದುವರಿದಿರುತ್ತದೆ.

ಈ ಎರಡು ಬೆಳವಣಿಗಳ ನಡುವಿನ ಈ ಅಂತರವೇ ಮಕ್ಕಳಲ್ಲಿ ಮತ್ತು ಅವರ ಪಾಲಕ ವರ್ಗದಲ್ಲಿ ಅನೇಕ ಗೊಂದಲಗಳನ್ನು ತಂದೊಡ್ಡುತ್ತದೆ.

**ಹದಿಹರೆಯದ ಮಕ್ಕಳಲ್ಲಿ ಕಂಡುಬರುವಂತಹ ಲಕ್ಷಣಗಳು**

1. ನಾವು ಮಾಡುತ್ತಿರುವುದು ಸರಿಯಾಗಿ ಇದೆ.
2. ನಾವುಮಾಡುವ ಕೆಲಸವನ್ನು ನಮ್ಮ ಪಾಲಕರು ಒಪ್ಪಿಕೊಳ್ಳುವುದಿಲ್ಲ
3. ನಮ್ಮ ಪಾಲಕರು ವೃತಃ ನಮ್ಮನ್ನು ನಿಯಂತ್ರಿಸುತ್ತಾರೆ
4. ನಮ್ಮ ಪಾಲಕರು ಇನ್ನೂ ಅಪ್ ಡೇಟ್ ಆಗಲೇ ಇಲ್ಲ ಎನ್ನುವ ಮನೋಬಾವನೆ.
5. ನನ್ನ ಜೀವನ ನನ್ನ ಆಯ್ಕೆ ಎನ್ನುವು ಮತ್ತು ಅತಿ ರಂಜಿತ ವಿಷಯ ವಸ್ತುಗಳಲ್ಲಿ ಆಸಕ್ತಿಯನ್ನು ಹೊಂದುವುದು.

**ಹದಿಹರೆಯದ ಮಕ್ಕಳ ಪಾಲಕರಲ್ಲಿ ಕಂಡು ಬರುವಂತಹ ಆತಂಕಗಳು/ಅರೋಪಗಳು.**

1. ಮಕ್ಕಳು ಮನೆಯಲ್ಲಿ ಪಾಲಕರ ಮಾತು ಕೇಳುತ್ತಿಲ್ಲ
2. ಮಾಡುವ ಕೆಲಸದಲ್ಲಿ ಶ್ರದ್ಧೆ ಇಡುವುದಿಲ್ಲ
3. ಪಾಲಕರ ಅಭಿಪ್ರಾಯವಷ್ಟೇ ಅಲ್ಲ ಅನಿಸಿಕೆಯನ್ನೂ ಕೇಳುವುದಿಲ್ಲ.
4. ಎಲ್ಲಾ ತಿಳಿದಿದೆ ಎನ್ನುವ ಮತ್ತು ಏನಾದರೂ ಮಾಡಬಲ್ಲೆ ಎನ್ನುವ ಅತಿಯಾದ ಆತ್ಮವಿಶ್ವಾಸ.



**ಜಿ. ಶಿವಕುಮಾರ್ ಸೋಗಿ,**
**ಕಾರವಾರ, ಕೈಗಾ.**
9008130204

5.ಅತಿ ರಂಜಿತ ವಿಚಾರಗಳಲ್ಲಿ ಆಶಕ್ತಿ ಮತ್ತು ತಪ್ಪು ದಾರಿ ಹಿಡಿಯುತ್ತಾರೆ ಎನ್ನುವ ಆತಂಕ.

ಹಾಗಾಗಿ ಹದಿಹರೆಯದ ಮಕ್ಕಳು ಅವರ ಕಡೆಯಿಂದ ತಾವು ಮಾಡುತ್ತಿರುವುದು ಸರಿ ಎನಿಸುವುದರಲ್ಲಿ ತಪ್ಪಿಲ್ಲ ಹಾಗೆಯೆ ಪಾಲಕ ವರ್ಗವು ತಮ್ಮ ಮಕ್ಕಳ ಬಗ್ಗೆ ಅವರ ಭವಿಷ್ಯದ ಬಗ್ಗೆ ಹೊಂದಿರುವ ಕಳಕಳಿ, ಆತಂಕವು ಮತ್ತು ಭಯ ಕೂಡ ಸರಿಯಾದುದ್ದೆ, ಆದರೆ ಈ ಹಂತಹಲ್ಲಿ ಪಾಲಕರ ಅನುಭವ, ಜಾಣ್ಮೆ ಮತ್ತು ಸಹನೆ ಅವರ ಜವಾಬ್ದಾರಿಯನ್ನು ನಿಭಾಹಿಸುವಲ್ಲಿ ಸಹಾಯ ಮಾಡಬಹುದಾಗಿದೆ. ಅದು ಹೇಗೆ ನಮ್ಮ ಪಾಲಕ ವರ್ಗ ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಮಕ್ಕಳೊಂದಿಗೆ ನೆಡೆದುಕೊಳ್ಳಬೇಕು ಎನ್ನುವುದಾದರೆ.

1. ಮಕ್ಕಳ ಭಾವನಾತ್ಮಕ ಬೆಳವಣಿಗೆಯನ್ನು ಪುರಸ್ಕರಿಸುತ್ತಾ ಭೌದ್ದಿಕವಾಗಿ ತರ್ಕಬದ್ಧವಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಪಾಲಕರು ಮಾರ್ಗದರ್ಶನ ಮಾಡಬೇಕು. ಏಕೆಂದರೆ ಭಾವನಾತ್ಮಕ ಬೆಳವಣಿಗೆಯ ಪರಿಣಾಮವಾಗಿ ಮಕ್ಕಳು ತಮ್ಮ ಭಾವನೆಗಳನ್ನು ಹತೋಟಿಗೆ ತೆಗೆದುಕೆ?ಳ್ಳಲು ಸಾಧ್ಯವಾಗುವುದಿಲ್ಲ. ಅಥವಾ ಅತಿಯಾಗಿ ಪ್ರತಿಕ್ರಿಯೆಸುವ ಸಂಭವ ವಿರುತ್ತದೆ.

2. ಮಕ್ಕಳಿಗೆ ಬುದ್ದಿವಾದ ಅಥವಾ ಯಾವುದಾದರು ಸಲೆಹೆ ಸೂಚನೆಯನ್ನು ನೀಡುವುದಾದರೆ ಮೊದಲು ಅವರ ಮನಸ್ಥಿತಿಯನ್ನು ಅರಿತುಕೊಳ್ಳಿ ಅವರ ಸ್ನೇಹಿತರನ್ನು ಪರಿಚಸಿಕೊಳ್ಳಿ ಮತ್ತು ಅವರನ್ನು ಗೌರವಿಸಿ ಏಕೆಂದರೆ ಆ ಹಂತದಲ್ಲಿ ನಿಮ್ಮ ಮಕ್ಕಳಿಗೆ ನಿಮಗಿಂತ ಅವರ ಸ್ನೇಹಿತರ ಮೇಲೆಯೇ ಹೆಚ್ಚು ನಂಬಿಕೆ ಮತ್ತು ವಿಶ್ವಾಸವಿರುತ್ತದೆ.

3. ಮಕ್ಕಳ ಕುರಿತಾಗಿ ಅವರ ಅಭಿಪ್ರಾಯವನ್ನು, ಅನಿಸಿಕೆಗಳನ್ನು , ಸಲೆಹೆಗಳನ್ನು ಮುಕ್ತವಾಗಿ ಆಲಿಸಿ ಮತ್ತು ಅವರ ಪ್ರಯತ್ನಗಳಿಗೆ ಅಗತ್ಯ ಪ್ರೋತ್ಸಾಹ ಮತ್ತು ನಿಮ್ಮ ಕೈಲಾದ ಉತ್ತೇಜನವನ್ನು ನೀಡಿ.

4. ಉಪದೇಶವಾಗಲಿ, ಹೀಯಾಳಿಕೆಯಾಗಲಿ ಅವರಿಗೆ ಮತ್ತು ಅವರ ಸಾಮರ್ಥ್ಯದ ಕುರಿತ ಅಪನಂಬಿಯನ್ನಾಗಲಿ ಎಲ್ಲರೆದುರಿಗೆ ತೋರಿಸಬೇಡಿ. ನಿಮ್ಮ ಮಕ್ಕಳ ಭಾವೋದ್ವೇಗವನ್ನು ಅವರ ಕುತೂಹಲವನ್ನು ಮತ್ತು ನಿಮ್ಮ ಮಕ್ಕಳ ದೃಷ್ಟಿಕೋನವನ್ನು ಮೊದಲು ಪಾಲಕರು ಅರಿತುಕೊಳ್ಳಬೇಕು.

5. ನಿಮ್ಮ ಮಕ್ಕಳನ್ನು ಗೌರವಿಸಿ ನಿಮ್ಮ ಮಕ್ಕಳಿಗೆ ಅವರ ಭಾವನೆಗಳನ್ನು ಅವರ ಅನಿಸಿಕೆಗಳನ್ನು ಹಾಗು ಅವರ ಅಭಿಪ್ರಾಯವನ್ನು ನಿಮ್ಮಲ್ಲಿ ಹಂಚಿಕೊಳ್ಳುವುದಕ್ಕೆ ಅವಕಾಶ ನೀಡಿ. ಅವರ ಅಭಿಪ್ರಾಯಗಳನ್ನು ಗೌರವಿಸಿ. ನಿನ್ನಿಂದಾಗದು ಎನ್ನುವ ಹಣೆಪಟ್ಟಿಯನ್ನು ಯಾವುದೇ ಕಾರಣಕ್ಕೂ ಹಚ್ಚಬೇಡಿ.

ಪಾಲಕರಾದವರು ಈ ಒಂದು ವಿಚಾರವನ್ನು ಯಾವತ್ತೂ ಮರೆಯಬಾರದು ನಿಮ್ಮ ಹದಿಹರೆಯದ ಮಕ್ಕಳಿಗೆ ಯಾವುದೇ ಸಲಹೆ ಅಥವಾ ಬುದ್ಧಿವಾದ ಹೇಳಿದರೆ ಅದನ್ನು ಅವಾರು ಸ್ವೀಕರಿಸುವ ಮನಸ್ಥಿತಿಯಲ್ಲಿ ಇರವುದಿಲ್ಲ. ಬದಲು ನನ್ನನ್ನು ನನ್ನ ಮನಸ್ಥಿತಿಯನ್ನು , ನನ್ನ ಅಗತ್ಯವನ್ನು ನನ್ನ ಪೋಷಕರು ಅರಿಯುತ್ತಿಲ್ಲ, ನನ್ನ ಮಾತಿಗೆ ಕಿಮ್ಮತ್ತಿಲ್ಲ ಎಂದು ಭಾವಿಸುತ್ತಾರೆ. ಜೊತೆಗೆ ಹದಿಹರೆಯದ ಮಕ್ಕಳು ಮನೆಯಲ್ಲಿ ಇರುವುದಕ್ಕಿಂತ ಮನೆಯಿಂದಾಚೆ ಹೆಚ್ಚು ಕಾಲ ಕಳೆಯಲು ಅದರಲ್ಲೂ ವಿಶೇಷವಾಗಿ ಅವರ ಸ್ನೇಹಿತರ ಬಗ್ಗೆ ವಿಶೇಷವಾದ ಒಲವು ಮತ್ತು ಸೆಳೆತವನ್ನು ಹೊಂದಿರುತ್ತಾರೆ. ಪೋಷಕರು ಮತ್ತು ಸ್ನೇಹಿತರುಗಳ ಮಧ್ಯದಲ್ಲಿ ಹೊಂದಾಣಿಕೆಯ ಕೊರತೆಯನ್ನು ಅನುಭವಿಸುತ್ತಾರೆ. ಸ್ನೇಹಿತರ ಜೊತೆಗಿನ ವಿಶೇಷವಾದಂತಹ ಸೆಳೆತ ಅಥವಾ ಒಲವು ಸಹ ಈ ವಯಸ್ಸಿನ ಒಂದು ವಿಶೇಷವಾದ ಭಾವನಾತ್ಮಕ ಅಗತ್ತತೆಯಾಗಿರುತ್ತದೆ. ಹಾಗಾಗಿ ಪೋಷಕರು ತಮ್ಮ ಮಕ್ಕಳ ಈ ಮನಸ್ಥಿತಿಯನ್ಮ ತಪ್ಪಾಗಿ ಅರಿಯಬಾರದು.

ಈ ಹಂತದಲ್ಲಿ ನಿಮ್ಮ ಮಕ್ಕಳು ಶೈಕ್ಷಣಿಕವಾಗಿ ಎಷ್ಟೇ ಬುದ್ದಿವಂತರಿದ್ದರೂ ಅವರ ಭಾವನಾತ್ಮಕ ಬುದ್ಧಿಮತ್ತೆಯ ಬೆಳವಣಿಗೆ ಇರುವುದಿಲ್ಲ. ತಮ್ಮ ಭಾವನೆ ಗಳನ್ನು ಸರಿಯಾಗಿ ನಿಭಾಯಿಸುವ ಸಾಮರ್ಥ್ಯವನ್ನು ಕರಗತ ಮಾಡಿಕೊಂಡಿರುವುದಿಲ್ಲ. ಅವರ ಮನೆಯಲ್ಲಿನ ಯಜಮಾನರು ಹಿರಿಯರು, ಅವರ ಆಪ್ತರು ಹೇಳುತ್ತಿರುವ ವಿಚಾರಗಳು ಒಂದು ಹಂತಕ್ಕೆ ಸರಿ ಅನ್ನಿಸಿದರೂ, ಅದನ್ನು ಸರಿಯಾಗಿ ಗ್ರಹಿಸಿ ಅರ್ಥೈಸಿಕೊಂಡು ನಿರ್ಣಾಯಕ ಹಂತದ ಸಮಯದಲ್ಲಿ ಹಿನ್ನಡೆ ಅನುಭವಿಸುತ್ತಾರೆ, ಯಾವುದೇ ಕಾರ್ಯವನ್ನು ಕಾರ್ಯರೂಪಕ್ಕೆ ತರುವಲ್ಲಿ ಎಡವುತ್ತಾರೆ ಅಸಮರ್ಥರಾಗುತ್ತಾರೆ. ತಮ್ಮ ಭಾವನೆ ಗಳನ್ನಾಗಲಿ, ಅನಿಸಿಕೆಗಳನ್ನಾಗಲಿ ಅಭಿಪ್ರಾಯವನ್ನಾಗಲಿ ಸೂಕ್ತ ರೀತಿಯಲ್ಲಿ ವ್ಯಕ್ತಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಕಾರಣಗಳಿಂದಾಗಿ ಇಂತಹ ವೇಳೆಯಲ್ಲಿ ಅವರಿಗೆ ಪೋಷಕರ ಮಾನಸಿಕ ಬೆಂಬಲ ಮತ್ತು ಮಾರ್ಗದರ್ಶನ ಅಗತ್ಯವಿರುತ್ತದೆ.

ಹೌದು ಮಕ್ಕಳ ತಪ್ಪು, ನ್ಯೂನತೆಗಳನ್ನು ಸರಿಪಡಿಸುವುದರ ಜೊತೆಗೆ ನಿಮ್ಮ ಭಾವನೆಗಳನ್ನ ಅಭಿವ್ಯಕ್ತಿಪಡಿಸುವ ರೀತಿಯ ಬಗ್ಗೆಯೂ ಗಮನವಿರಲಿ. ನಿಮ್ಮ ಭಾವನೆಗಳನ್ನು ಸರಿಯಾದ ಸಮಯದಲ್ಲಿ ರೀತಿಯಲ್ಲಿ ವ್ಯಕ್ತಪಡಿಸುವುದು ಅತ್ಯಂತ ಮುಖ್ಯ. ಇಲ್ಲದಿದ್ದರೆ ನಿಮ್ಮ ಪ್ರಯತ್ನ "ಹೊಳೆಯಲ್ಲಿ ಹುಣಿಸೆ ಹಣ್ಣು ತೊಳೆದಂತೆ" ಜೊತೆಗೆ ಮಕ್ಕಳ ಮನಸ್ಸಿನ ಮೇಲೆ ಭಾರಿ ಪ್ರಮಾಣದ ಋಣಾತ್ಮಕ ಪರಿಣಾಮ ಉಂಟು ಮಾಡುತ್ತದೆ ಎನ್ನುವುದು ನಿಮಗೆ ತಿಳಿದಿರಲಿ. ಏಕೆಂದರೆ ಇದು "ಹದಿ ಹರೆಯದ ಮಕ್ಕಳ ಅಂತರಾಳದ ತಳಮಳ" ಅರಿತು ಕೊಂಡ(ರಷ್ಟೇ)ಷ್ಟೂ ನಿರಾಳ".

## ಹಂಪಿ ಉತ್ಸವದ ಧ್ವನಿ ಬೆಳಕು ಕಾರ್ಯಕ್ರಮದ ಪೂರ್ವಭ್ಯಾಸದಲ್ಲಿ ತೊಡಗಿರುವ ಕಲಾವಿದರು ಮತ್ತು ಕಾರ್ಯಕ್ರಮದ ಸಿದ್ಧತೆಯ ಚಿತ್ರಗಳು









## ಕವಿ ಮನಸು

### ಏನು ಸಂಭ್ರಮ ನಿನಗೆ



ಏನು ಸಂಭ್ರಮ ನಿಮಗೆ
ಭಾನು ಬರುತಿಹ ಘಳಿಗೆ
ಗೋಣನೆತ್ತುತ ಹೀಗೆ ನಗುವಿನೊಸಗೆ
ಜೇನು ತುಂಬಿದ ಎದೆಯ
ದಾನ ಮಾಡುವೆಯಲ್ಲ
ಗಾನದೊಂದಿಗೆ ಬರಲು ದುಂಬಿ ಬಳಿಗೆ


ಅಂದ ಬಣ್ಣವ ಹಚ್ಚಿ
ಚಂದ ನಿಮ್ಮಲಿ ತುಂಬಿ
ತಂದು ಇಟ್ಟವರಾರು ಗಿಡದಿ ಹೀಗೆ
ಒಂದು ದಿನದಲಿ ಮುಗಿವ
ಬಂಧಕೇನಿದು ಹರ್ಷ
ನಿಂದು ನೋಡಲು ಕಳೆದೆ ಮನದ ಬೇಗೆ

ಸಂಗ ಬಯಸುತ ಬರುವ
ಭೃಂಗಕೀಯುವೆ ರಸವ
ರಂಗುಯೇರಿದುದಲ್ಲೆ ನಿನ್ನ ಮೊಗದೆ
ಅಂಗನೇಯರು ಕಂಡು
ಗುಂಗಿನಲ್ಲಿಯೆ ಉಳಿದು
ಕಂಗಳಾಗಿವೆ ಹಿರಿದು ನಿನ್ನ ಹಾಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




## ತುಂಗಭದ್ರಾ ನೀರಿನ ಮಟ್ಟ



| ಶನಿವಾರ : 27-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.60 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 264 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 9.903 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1617.62 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8419 ಕ್ಯುಸೆಕ್ |
| ಸಾಮರ್ಥ್ಯ | 54.912 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

**ಕವಿ, ಪಂಡಿತರನ್ನು, ಕಲಾವಿದರನ್ನು ಸಾಮ್ರಾಜ್ಯದಲ್ಲಿ ಗೌರವಿಸಿ ಕನಾಕಾಭಿಷೇಕವನ್ನು ಮಾಡಿದ ಕನ್ನಡದ ಮಹಾ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ. ಈ ಸಾಮ್ರಾಜ್ಯವನ್ನು ಕನ್ನಡ ಸಾಮ್ರಾಜ್ಯ ಕನ್ನಡಿಗರ ಸಾಮ್ರಾಜ್ಯ, ಕರ್ನಾಟಕದ ಸಾಮ್ರಾಜ್ಯವೆಂದು ಕರೆಯಲಾಗಿದೆ. ಇಂಥಹ ಮಹೋನ್ನತ ಸಾಮ್ರಾಜ್ಯವನ್ನು ಮತ್ತೆ ಪುನರುತ್ಥಾನಿಸುವ ಅನಿವಾರ್ಯ ಅವಶ್ಯಕತೆ ಈಗ ನಮ್ಮೆಲ್ಲರ ಮುಂದಿದೆ.**

# ಕರ್ನಾಟಕದ ಸಂಸ್ಕೃತಿಯ ಸಿರಿನಾಡು ಹಂಪಿ

ಉತ್ಸವಗಳು, ಹಬ್ಬ, ಸಾಂಸ್ಕೃತಕ ಆಚರಣೆಗಳ ಪರಂಪರೆಯಲ್ಲಿ ಹಂಪಿಗೆ ಬಹುಮುಖಿ ಆಯಾಮಗಳು ಹಾಗೂ ಚಾರಿತ್ರಿಕವಾದ ಮಹತ್ವ ಇದೆ. ಈಗಲೂ ಕರ್ನಾಟಕದ ಸಂಸ್ಕೃತಿಯ ಸಿರಿನಾಡು ಹಂಪಿಯೇ ಆಗಿದೆ. ವಿಜಯನಗರ ಪೂರ್ವ ವಿಜಯನಗರ ಹಾಗೂ ವಿಜಯನಗರ ನಂತರದ ಕಾಲಘಟ್ಟದಲ್ಲಿ ಹಂಪಿ ಸಾಂಸ್ಕೃತಿಕ ವೈಭವದ ಉತ್ತುಂಗವನ್ನ ಕಂಡ ನೆಲವಾಗಿದೆ, ಹೀಗಾಗಿ ಉತ್ಸವಗಳೆಂದರೆ ಅದರಲ್ಲೂ ಸಾಂಸ್ಕೃತಿಕ ಉತ್ಸವ ಗಳೆಂದರೆ ಹಂಪಿಯ ಪ್ರದೇಶದಲ್ಲಿ ಉತ್ಸಾಹ ಹಾಗೂ ಭಾವನಾತ್ಮಕ ಸಂಬಂಧವಿದೆ. ಕಲೆ, ವಾಸ್ತು ಶಿಲ್ಪ ವಿಶೇಷವಾಗಿ ಸಂಗೀತ ಹಾಗೂ ಕರ್ನಾಟಕ ಸಂಗೀತವನ್ನು ನಾಡಿಗೆ ಕೊಟ್ಟ ನೆಲ ಹಂಪಿ. ವಿದ್ಯಾರಣ್ಯರು ಹಾಗೂ ಅವರ ಸಂಗೀತಸಾರದಿಂದ ಹಿಡಿದು ವ್ಯಾಸರಾಯರು, ಪುರಂದಾಸರು, ಕನಕದಾಸರು ಹೀಗೆ ದಾಸವರಣ್ಯೆರು ನೆಲಸಿ ಜನಸಾಮಾನ್ಯರಿಗೆ ಸಂಗೀತದ ಮೂಲಕ ದೇಶಿ ಸಂಗೀತವನ್ನು ಮನೆಮನೆಗೆ ತಲುಪಿಸಿದ ನೆಲ ಹಂಪಿ. ಇಂಥ ಸಾಹಿತ್ಯಿಕ ಸಾಂಸ್ಕೃತಿಕ ನೆಲದಲ್ಲಿ ಪಂಪಾ ವಿರೂಪಾಕ್ಷರ ಉತ್ಸವಗಳ ಜೊತೆಗೆ ಹಂಪಿ ಉತ್ಸವವು ಸಹ ನಮ್ಮ ಕಾಲಘಟ್ಟದಲ್ಲಿ ನಡೆಯುತ್ತಿರುವ ಸ್ಥಳಿಯ ಜನರ ಭಾವನಾತ್ಮಕವಾದ ಸಾಂಸ್ಕೃತಿಕ ಉತ್ಸವವಾಗಿದೆ.ಇದೇ ಫೆಬ್ರವರಿ 2,3,4ರಂದು ಹಂಪಿ ಉತ್ಸವ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಹಂಪಿಯ ಸಾಂಸ್ಕೃತಿಕ ಅಸ್ಮಿತೆ ಕುರಿತು ಒಂದು ಕಿರು ನೋಟ.



ಧಾರ್ಮಿಕ, ಪುರಾಣ, ಐತಿಹ್ಯ,ಸಾಂಸ್ಕೃತಿಕ ಹಾಗು ಚಾರಿತ್ರಿಕವಾದ ನೆಲ ಹಂಪಿ. ಇಂತಹ ಸಾಂಸ್ಕೃತಿಕ ಇತಿಹಾಸ ಪರಂಪರೆಯ ನೆಲವನ್ನು ಈಗ ಆಧುನಿಕ ಕಾಲದಲ್ಲಿ ನಿಂತು ನಾವು ಗ್ರಹಿಸುವ , ನೋಡುವ ಹಂಪಿಯೇ ಬೇರೆ ರೀತಿಯದೆ ಆಗಿದೆ. ಏಕೆಂದರೆ ಹಂಪಿಯನ್ನು ಹಾಳು ಹಂಪಿಯಾಗಿ, ಪ್ರವಾಸಿ ಕೇಂದ್ರವಾಗಿ ಮಾತ್ರ ನೋಡುತ್ತಿದ್ದೇವೆ. ಈ ಸಂದರ್ಭದಲ್ಲಿ ಹಂಪಿ ಉತ್ಸವದ ನೆಪದಲ್ಲಿ ಕೇವಲ ಸಂಗೀತ ಹಾಡು ಕುಣಿತ ಮನರಂಜನೆ ಹಾಗೂ ಚಿತ್ರನಟರನ್ನು,ರಾಜಕಾರಣಿಗಳನ್ನು ಕರೆತಂದು ಯುವಜನರಿಗೆ ತೋರಿಸಿ, ಜನಸಾಗರವನ್ನು ನೋಡಿ

ಹಂಪಿ ಉತ್ಸವ ಯಶಸ್ವಿಯಾಯಿತು ಎಂದರೆ ಉತ್ಸವದ ಸಾರ್ಥಕತೆಯು ಆಗುವುದಿಲ್ಲ.ಮನರಂಜನೆಯ ಜೊತೆಗೆ ಹಂಪಿ ವಿಜಯನಗರ ಸಾಮ್ರಾಜ್ಯದ ಗತವೈಭವದ ಚರಿತ್ರೆ ಯನ್ನು ಇಂದಿನ ಯುವಜನಾಂಗಕ್ಕೆ ನೆನಪಿಸುವ,ಅವರು ಮನಕ್ಕೆ ಮುಟ್ಟುವ ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗಿದೆ.

ನಾವು ಆಚರಿಸುವ ಸಾಂಸ್ಕೃತಿಕ ಹಬ್ಬಗಳನ್ನು 600 ವರ್ಷಗಳ ಹಿಂದಿಯೇ ವಿಜಯನಗರ ಸಾಮ್ರಾಜ್ಯದಲ್ಲಿ ಅತ್ಯಂತ ವೈಭವಪೇತವಾಗಿ ಆಚರಿಸಿದ ಚರಿತ್ರೆ ನಮ್ಮ ಕಣ್ಣಮುಂದಿದೆ. ಹಾಗಾಗಿ ಹಂಪಿ ಕೇವಲ ಧಾರ್ಮಿಕ ,ಪ್ರೇಕ್ಷಣೀಯ ಸ್ಥಳವಲ್ಲ ತನ್ನ ಒಡಲಾಳದಲ್ಲಿ ಬಹುಮುಖಿ ಆಚರಣೆಗಳನ್ನು ತುಂಬಿಕೊಂಡಿದೆ .ಇಂದಿನ ನಾಡಹಬ್ಬವನ್ನು ಅಂದು ನಾಡ ಹಬ್ಬವನ್ನಾಗಿ ಆಚರಿಸಿದ ಹೆಗ್ಗಳಿಕೆ ವಿಜಯನಗರದ ಅರಸರಿಗೆ ಸಲ್ಲುತ್ತದೆ.ವಿಜಯನಗರ ಸಾಮ್ರಾಜ್ಯದ ವಿವಿಧ ಕಾಲಘಟ್ಟದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿಯರ ಬರಹಗಳಿಂದ ಮಹಾನವಮಿಯ ಉತ್ಸವ ಎಷ್ಟೊಂದು ವರ್ಣಮಯವಾಗಿತ್ತು ಎನ್ನುವುದು ಗೊತ್ತಾಗುತ್ತದೆ. ಇದಕ್ಕೆ ಜೀವಂತ ಸಾಕ್ಷಿಯಾಗಿ ಮಹಾನವಮಿ ದಿಬ್ಬ ನಮ್ಮ ಕಣ್ಣಮುಂದಿದೆ. ಆ ದಿನದಲ್ಲಿ ಕಲೆ ಕ್ರೀಡೆಗಳಿಗೆ ಬಹು ಮಹತ್ವವನ್ನು ಕೊಟ್ಟಿದ್ದರು. ದಸರಾ ಉತ್ಸವದಲ್ಲಿ ನೃತ್ಯ ,ಪೈಲ್ವಾನರ ಕುಸ್ತಿ ಪ್ರದರ್ಶನಗಳು ,ವಿದೂಷಕರ ಹಾಸ್ಯಗಳು ವಿವಿಧ ವೇಷಧಾರಿಗಳ ಆಟಗಳು ಕಲಾವಿದರ ವಿವಿಧ ಮನರಂಜನ ಕಾರ್ಯಕ್ರಮಗಳು ಬಾಣ ಬಿರುಸು ಪಟಾಕಿಗಳು ಹೀಗೆ ದಸರಾ ಸಂದರ್ಭದಲ್ಲಿಹಂಪಿ ಸಾಂಸ್ಕೃತಿಕವಾಗಿ ಮಾರ್ಪಾಡಾಗಿರುವುದನ್ನು ನಾವು ಚರಿತ್ರೆಯ ಪುಟಗಳಲ್ಲಿ ನೋಡಬಹುದಾಗಿದೆ.



**ಹಂಪಿ ಒಳನೋಟ**

ಎಂ.ಎಂ.ಶಿವಪ್ರಕಾಶ
ಹೊಸಪೇಟೆ

ಸಾಂಸ್ಕೃತಿಕ ಪರಂಪರೆಯಲ್ಲಿ ಹಂಪಿಯ ನೆಲಕ್ಕೆ ಚಾರಿತ್ರಿಕ ವಾದಂತಹ ಮಹತ್ವವಿದೆ. ಕ್ರಿ.ಶ. ಐದನೇ ಶತಮಾನದ ಮಾತಂಗ ಮುನಿಯ ಬೃಹದ್ದೇಶಿ ಯಿಂದ ಪ್ರಾರಂಭಗೊಂಡು ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಕವಿ ಕಲಾವಿದರು ಪಂಡಿತರು ಮೊದಲಾದವರಿಂದ ಸಂಗೀತದ ಕೇಂದ್ರವೇ ಆಗಿತ್ತು. ಹಂಪೆಯ ಕಂಬಗಳಲ್ಲಿ ಸಂಗೀತ ಹೊರಹೊಮ್ಮುವುದನ್ನು ಕೇಳಿದಾಗ ಸಂಗೀತಕ್ಕೆ ಎಷ್ಟು ಮಹತ್ವವನ್ನು ಕೊಟ್ಟಿದ್ದರು ಎನ್ನುವುದುತಿಳಿಯುತ್ತದೆ. ಸಂಗೀತಕ್ಕೆ ಒಂದು ನಿರ್ದಿಷ್ಟವಾದ ರೂಪವನ್ನು ಕೊಟ್ಟ ನೆಲವೆಂದರೆ ಹಂಪಿಯೇ ಆಗಿದೆ .ಮಾತಂಗ ಮುನಿಯ ಬೃಹದ್ದೇಶಿ ದೇಸಿ ಕೃತಿಯು ಭಾರತೀಯ ಶಾಸ್ತ್ರೀಯ ಸಂಗೀತಕ್ಕೆ ಕೊಟ್ಟ ಬಹುದೊಡ್ಡ ಕೊಡುಗೆಯಾಗಿದೆ .ಅಲ್ಲಿಂದ ವಿದ್ಯಾರಣ್ಯರ ಸಂಗೀತಸಾರ ಗ್ರಂಥವು ಸಹ ಸಂಗೀತ ಕ್ಷೇತ್ರಕ್ಕೆ ಕೊಟ್ಟ ಮಹತ್ವದ ಗ್ರಂಥವಾಗಿದೆ .ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತ ಎಂಬ ವಿಚಾರ ಈ ಸಂಗೀತಸಾರದಲ್ಲಿದೆ ಕರ್ನಾಟಕ ಸಂಗೀತದ ಪರಂಪರೆ ವಿದ್ಯಾರಣ್ಯರಿಂದ ಪ್ರಾರಂಭಗೊಂಡು ಮುಂದೆ ದಾಸ ಪರಂಪರೆಯಲ್ಲಿ ಕರ್ನಾಟಕ ಸಂಗೀತವೆಂದುಪ್ರಸಿದ್ಧ ಪಡೆದುಕೊಂಡಿತು. ವಿಜಯನಗರದ ಕಾಲದಲ್ಲಿ ಇದ್ದ ಸಂಗೀತ ಪಂಡಿತರು, ಸ್ವರಗಳ ಚೌಕಟ್ಟು ರಾಗ ವಿಭಾಗಗಳು ಮತ್ತು ಸಂಗೀತದ ಪರಿಭಾಷಿಕತೆಯನ್ನು ವಿಶ್ಲೇಷಿಸಿ ಭಾರತದ ಸಂಗೀತ ಹಾಗು ಕರ್ನಾಟಕ ಸಂಗೀತಕ್ಕೆ ಮಹತ್ವದ ಸ್ಥಾನವನ್ನು ಒದಗಿಸಿಕೊಟ್ಟರು.

### ಕರ್ನಾಟಕ ಸಂಗೀತ

ವಿಜಯನಗರದ ಸಾಮ್ರಾಜ್ಯ ದಲ್ಲಿ ಸಂಗೀತ ಕಲೆ ವಾಸ್ತುಶಿಲ್ಪಕ್ಕೆ ರಾಜಶ್ರಯ ಸಿಕ್ಕಿತು. ಕವಿ ಕಲಾವಿದರನ್ನು ಗೌರವಿಸುವ ಪರಂಪರೆ ಹಾಗೂ ವಿಜಯನಗರದಲ್ಲಿ ಸಂಗೀತಕ್ಕೆ ವಿಶೇಷ ಸ್ಥಾನಮಾನಗಳಿದ್ದವು. ಉಡುಪಿಯಿಂದ ಹಂಪಿಗೆ ಬಂದು ನೆಲೆಸಿದ ವ್ಯಾಸರಾಯರಿಂದ ದಾಸ ಸಾಹಿತ್ಯ ರಚನೆ ಆಯ್ತು .ಇವರ ಮಾರ್ಗದರ್ಶನದಲ್ಲಿ ಪುರಂದರದಾಸರು, ಕನಕದಾಸರು ಕೀರ್ತನೆ, ಸುಳಾದಿಗಳನ್ನು ರಚಿಸಿದರು. ಪುರಂದಾಸರು ರಾಗಗಳಲ್ಲಿ ವೈವಿಧ್ಯತೆ ಮತ್ತು ಸರಳತೆಯನ್ನು ಸಾಧಿಸಿದವರು. ಇವರ ಈ ಸಾಧನೆಗಾಗಿ ಕರ್ನಾಟಕದ ಸಂಗೀತದ ಪಿತಾಮಹ ಎಂದು ಪುರಂದಾಸರನ್ನು ಕರೆದಿದ್ದಾರೆ. ಇವರ ನೆನಪಿಗಾಗಿಯೇ ತುಂಗಭದ್ರ ತೀರದಲ್ಲಿ ಹಂಪಿಯ ಪುರಂದರ ಮಂಟಪ ನಮ್ಮ ಗಮನ ಸೆಳೆಯುತ್ತದೆ.

ವಿಜಯನಗರ ಸಾಮ್ರಾಜ್ಯದ ದೊರೆಗಳು ಕೇವಲ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವುದಕಷ್ಟೇ ತಮ್ಮನ್ನು ಸೀಮಿತಿ ಗಳಿಸಿಕೊಂಡವರಲ್ಲ ಕನ್ನಡದ ಸಾಹಿತ್ಯ ಕಲೆ ಸಂಸ್ಕೃತಿಯನ್ನು ಉಳಿಸುವ ಅದನ್ನು ಎತ್ತಿ ಹಿಡಿಯುವ ಕಾರ್ಯವನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದ ಹೆಗ್ಗಳಿಕೆ ಚರಿತ್ರೆಯಿಂದ ತಿಳಿದು ಬರುತ್ತದೆ ವಿಜಯನಗರ ದಶ ದಿಕ್ಕುಗಳಲ್ಲಿ ನಿಜ ಅರ್ಥದಲ್ಲಿ ವಿಜಯವನ್ನೇ ಗಳಿಸಿತ್ತು ಈ ನೆಲದಲ್ಲಿ ರಚನೆಗೊಂಡಂತ ಸಾಹಿತ್ಯ ಹಾಗೂ ನೆಲ ನಿಂತ ಸಾಹಿತಿಗಳು, ನೂರೊಂದು ವಿರಕ್ತರು, ಕಲಾವಿದರನ್ನು ಮತ್ತಾವ ಸಾಮ್ರಾಜ್ಯದಲ್ಲಿಯೂ ಕಾಣಲು ಸಾಧ್ಯವಿಲ್ಲ ಇವರು ಅಚ್ಚಗನ್ನಡದಲ್ಲಿ ಸಾಹಿತ್ಯವನ್ನು ಸೃಷ್ಟಿಸಿ ಕನ್ನಡದ ಸಾಮ್ರಾಜ್ಯಕ್ಕೆ ನಿಜ ಅರ್ಥದಲ್ಲಿ ಕನ್ನಡತನವನ್ನು ತಂದುಕೊಟ್ಟವರು. ಹೀಗಾಗಿ ಹಂಪಿಯು ಈ ನಾಡಿನ ಸಾಹಿತ್ಯಿಕ ಸಾಂಸ್ಕೃತಿಕ ರಾಜಧಾನಿಯೇ ಆಗಿದೆ .ಇಂತಹ ಸ್ಥಳದಲ್ಲಿ ಕನ್ನಡದ ಸಾಹಿತ್ಯ, ಸಂಸ್ಕೃತಿ, ಕಲೆ ವಾಸ್ತುಶಿಲ್ಪ ನೆನಪಿಸುವ ಹಂಪಿ ಉತ್ಸವದ ಸಂಭ್ರಮ.

ತ್ರೇತಾಯುಗದಲ್ಲಿ ಶ್ರೀರಾಮ ಹಂಪಿಗೆ ಬಂದು ಪಂಪಾವಿರೂಪಾಕ್ಷರ ದರ್ಶನ ಆಶೀರ್ವಾದ ಪಡೆದು ಸೀತಾನ್ವೇಷಣೆಗೆ ಹೊರಟ ನೆಲ. ರಾಮಾಯಣದ ಕಿಷ್ಕಿಂದೆ ಹನುಮ ನಿಲ್ಲಿಸಿದ ಜನಿಸಿದ ನಾಡು. ಇದಕ್ಕೂ ಪೂರ್ವದಲ್ಲಿ ಪಾರ್ವತಿ ಶಿವನನ್ನು ಕುರಿತು ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ ಧಾರ್ಮಿಕ ನೆಲ.ಶಿವ ಪಾರ್ವತಿಯರ ಕಲ್ಯಾಣೋತ್ಸವ ನಡೆದ ಪವಿತ್ರವಾದ ನೆಲ.ನಂತರ ಹರಿಹರ ರಾಘವಾಂಕ ಕವಿಗಳು ಪಂಪ ವಿರೂಪಾಕ್ಷರನ್ನು ಕುರಿತು ರಗಳೆ ಕಾವ್ಯಗಳನ್ನು ಬರೆದ ನೆಲ. ವಿಜಯನಗರದ ದೊರೆ ಪ್ರೌಢದೇವರಾಯನ ಕಾಲದಲ್ಲಿ ನೂರೊಂದು ವಿರಕ್ತರು ನೆಲೆ ನಿಂತು ವಚನ ಸಾಹಿತ್ಯವನ್ನು ಸಂಗ್ರಹಿಸಿ ವಿಶ್ಲೇಷಿಸಿದ ನೂರಾರು ಕವಿ ಪಂಡಿತರು. ಈ ಕವಿ, ಪಂಡಿತರನ್ನು, ಕಲಾವಿದರನ್ನು ಸಾಮ್ರಾಜ್ಯದಲ್ಲಿ ಗೌರವಿಸಿ ಕನಾಕಾಭಿಷೇಕವನ್ನು ಮಾಡಿದ ಕನ್ನಡದ ಮಹಾ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ. ಈ ಸಾಮ್ರಾಜ್ಯವನ್ನು ಕನ್ನಡ ಸಾಮ್ರಾಜ್ಯ ಕನ್ನಡಿಗರ ಸಾಮ್ರಾಜ್ಯ, ಕರ್ನಾಟಕದ ಸಾಮ್ರಾಜ್ಯವೆಂದು ಕರೆಯಲಾಗಿದೆ. ಇಂಥಹ ಮಹೋನ್ನತ ಸಾಮ್ರಾಜ್ಯವನ್ನು ಮತ್ತೆ ಪುನರುತ್ಥಾನಿಸುವ ಅನಿವಾರ್ಯ ಅವಶ್ಯಕತೆ ಈಗ ನಮ್ಮೆಲ್ಲರ ಮುಂದಿದೆ.

# ರಾಮೋತ್ಸವದ ಭಾವುಕ ಲಹರಿ

ಸರಯೂ ನದಿ ತಟದಲ್ಲಿ ಸ್ಥಿತವಾದ, ಪ್ರಾಚೀನ ಛಪ್ಪನ್ನೈವತ್ತಾರು ದೇಶಗಳಲ್ಲಿ ಒಂದಾಗಿದ್ದ "ಕೋಸಲ"ದ ರಾಜಧಾನಿ ಅಯೋಧ್ಯೆ. ಇದು ಅಂದಿಗೂ ಇಂದಿಗೂ ಪುಣ್ಯ ತೀರ್ಥಭೂಮಿಯೇ ಹೌದು. ಯಾಕೆಂದರೆ ಭಗವಾನ್ ವಿಷ್ಣುವಿನ 7ನೇ ಅವತಾರವಾದ, ರಘುವಂಶ ಎಂದೇ ಹೆಸರಾದ, ಸೂರ್ಯವಂಶ ಸಂಜಾತ ದಶರಥ ಸುತ–ಕೌಸಲ್ಯ ನಂದನ ಶ್ರೀರಾಮರಿಗೆ ಜನ್ಮವಿತ್ತ ಭೂಮಿಯಲ್ಲವೇ!!!

ಪ್ರಾಚೀನ ಕಾಲದಿಂದಲೂ ಏನೆಲ್ಲಾ ಘಟನೆಗಳಿಗೆ ಸಾಕ್ಷಿಯಾಯಿತು ಭವ್ಯ ಅಯೋಧ್ಯೆಪುರಿ!! ಋಷ್ಯಶೃಂಗರ ನೇತೃತ್ವದಲ್ಲಿ ನಡೆದ, ದಶರಥನ ಪುತ್ರಕಾಮೇಷ್ಠಿ ಯಾಗಕ್ಕೆ ಅಭೂತಪೂರ್ವ ಸಾಕ್ಷಿಯಾಯಿತು. ( ನಾವು ಕೇಳಿರಬಹುದು ಋಷ್ಯಶೃಂಗರು ಬಂದರೆಂದರೆ, ಅಲ್ಲಿ ಸದಾ ಹಸಿರು, ಸಮೃದ್ಧತೆಯೇ ನೆಲೆಸಿರುವುದು. ಹಾಗಾಗಿಯೇ ನಮ್ಮ ಶೃಂಗೇರಿಯ ಪ್ರದೇಶ ಅಷ್ಟು ಸಮೃದ್ಧ ಹಸಿರಿನಿಂದ ಇರುವುದು) ಮಕ್ಕಳಾದ

ನಂತರ ಮಕ್ಕಳಾದ ರಾಮ–ಲಕ್ಷಣ–ಭರತ– ಶತೃಘ್ನರ ಶಸ್ತ್ರಾಭ್ಯಾಸದಿಂದ, ಅವರಾಡಿದ ಹೆಜ್ಜೆಗಳಿಂದ ಅಯ್ಯೋಧ್ಯೆಯ ಮಣ್ಣಿನ ಪ್ರತಿ ಕಣವೂ ತೀರ್ಥಸ್ವರೂಪವನ್ನೇ ಪಡೆಯಿತು.

ಕುಲಗುರು ವಿಶ್ವಾಮಿತ್ರರು ತಮ್ಮ ಯಜ್ಞ ಯಾಗಾದಿಗಳಿಗೆ ತೊಂದರೆ ಮಾಡುತ್ತಿದ್ದ ಮಾರೀಚರನ್ನು, ಸಂಹರಿಸಲು ಒಂದು ನೆಪವಾಗಿಸಿ ಕರೆದೊಯ್ದ ಘಟನೆಯೇ, ಶ್ರೀರಾಮರು ಜನಕ ಆಸ್ಥಾನದಲ್ಲಿ "ಶಿವ ಧನಸ್ಸು" ಮುರಿದು, "ಅವನಿ ಸುತೆ ಸೀತಾಮಾತೆ"ಯನ್ನು ವಿವಾಹವಾಗಿಸಲು ಕಾರಣವಾಯಿತು.

ದಶರಥನ ನಾಲ್ಕೂ ಪುತ್ರರು, ಜನಕ ಮಹಾರಾಜರ ಪುತ್ರಿಯರನ್ನು ವಿವಾಹವಾಗಿ ಬಂದಾಗ, ಇಡೀ ಅಯೋಧ್ಯೆಯ ನಿವಾಸಿಗಳು ಕಾತರರಾಗಿ, ನವ ವಧುವರರಿಗೆ ಸ್ವಾಗತ ನೀಡಲು ಸ್ವರ್ಗದಂತೆ ಸಿಂಗಾರಿಸಿದ್ದರು.

ವಾಡಿಕೆಯಂತೆ ದಶರಥನು ಹಿರಿಮಗನಿಗೆ ಆಳ್ವಿಕೆಯನ್ನು ಹಸ್ತಾಂತರಿಸುವಾಗಲೂ ಅಯೋಧ್ಯಾಪುರಿಗೆ ಸ್ವರ್ಗವೇ ಧರೆಗಿಳಿದು ಬಂದಿತ್ತು. ಅಬ್ಬಾ!! ಏನು ಸಡಗರ–ಸಂಭ್ರಮ ಕೋಸಲದ ಪ್ರಜೆಗಳಿಗೆ!!

ಈಗ ಶ್ರೀರಾಮರ ಪ್ರಾಣಪ್ರತಿಷ್ಠಾನದಲ್ಲಿ ಅಯೋಧ್ಯೆಯನ್ನು ಕಣ್ತುಂಬಿಕೊಳ್ಳುವಾಗ ಕ್ಷಣಕ್ಷಣವೂ ಅನ್ನಿಸುವುದು ಏನಂದರೆ, "ಆಗ ನಾವು ಕೋಸಲದ ಪ್ರಜೆಗಳಾಗಿದ್ದು, ಅಯೋಧ್ಯೆಯ ಆ ಸ್ವರ್ಗ ಸಾದೃಶ್ಯವಾದ, ಶ್ರೀ ರಾಮ ಪಟ್ಟಾಭಿಷೇಕವನ್ನು ಕಣ್ತುಂಬಿಕೊಂಡಿರಬೇಕು ಹಾಗಾಗಿಯೇ ಮತ್ತೊಮ್ಮೆ ಭಾರತದ ಪ್ರಜೆಗಳಾಗಿ, ಮತ್ತೊಮ್ಮೆ ಈ ಸಮಯಶ್ರೀರಾಮರಪ್ರತಿಷ್ಠಾಪನಾಸಂಭ್ರಮವನ್ನುಕಣ್ತುಂಬಿಕೊಂಡಿದ್ದೇವೆ" ಎಂದರೂ ಅತಿಶಯವಲ್ಲ.

ಆದರೆ ನಂತರ ಅಯೋದ್ಯೆಯು ದುಃಖದ ಘಟನೆಯ ಭಾಗವಾಗಿ, ಆ ವನವಾಸದ ಘಟನೆಗೂ ಸಾಕ್ಷಿಯಾಯಿತು. ಏಕೆಂದರೆ ನಿವಾಸಿಗಳಿಗೆ ಶ್ರೀ ರಾಮರ ಪಟ್ಟಾಭಿಷೇಕದ ಸಂಭ್ರಮ ಬಹಳ ದಿನ ಉಳಿಯಿಲ್ಲ. ಪಿತೃವಾಕ್ಯ ಪರಿಪಾಲನೆಗಾಗಿ, ವನವಾಸಕ್ಕೆ ತೆರಳಿದ ಮೇಲೆ, ಶ್ರೀರಾಮರಿಲ್ಲದ ಅಯೋಧ್ಯೆಯಲ್ಲಿ ಸಂತಸ– ಅನಂದ ಎಲ್ಲಿರಲು ಸಾಧ್ಯ!? ಏಕೆಂದರೆ, ರಾಜಕುಮಾರನಾಗಿದ್ದ ಶ್ರೀ ರಾಮನು, ರಾಜ ದಶರಥನಿಗಿಂತ ಕೋಸಲ ಪ್ರಜೆಗಳಿಗೆ ಹೆಚ್ಚು ಹತ್ತಿರವಾಗಿದ್ದ. ರಾಜಪುತ್ರನೆಂಬ ಭಾವವಿಲ್ಲದೇ, ಅವರ



ಸುಖ ದುಃಖಗಳನ್ನು ಪ್ರಜೆಗಳಿರುವಲ್ಲಿ ಹೋಗಿ ವಿಚಾರಿಸಿ, ಎಲ್ಲರಲ್ಲಿ ಒಂದಾಗಿ ಬೆರೆತು ಮಾತನಾಡುತ್ತಿದ್ದ, ರಘುಕುಲ ತಿಲಕನಾದ ಶ್ರೀ ರಾಮನನ್ನು ಬಿಟ್ಟು, ಅಯೋಧ್ಯೆಯ ಜನರು ಇರಲು ಸಾಧ್ಯವೇ!? ಅವರಿಗೆ ಅದು ವಿರಹವೇದನೆಯೇ. ಸಹಿಸಲಾಗದ ಸಂಕಟ. ಹಾಗಾಗಿ ಹಗಲಲ್ಲೂ ಸೂರ್ಯ ಮುಳುಗಿದಾಗ ಆಗುವಂತಹ ತಡಕಾಡುವ ಸ್ಥಿತಿಯೇ ಅಯೋಧ್ಯೆ ನಿವಾಸಿಗಳಿಗೆ ಆಗಿತ್ತು. ಅದೇ ವೇದನೆಯಲ್ಲಿ ದಶರಥ ಮಹಾರಾಜರು ಇಹಲೋಕ ತ್ಯಜಿಸಿ, ಇನ್ನೂ ಕತ್ತಲೆಯೇ ಕವಿದಂತಾದ ಆ ದುಃಖದ ಘಟನೆ ಅಯೋದ್ಯೆಯು ನಾವು ಹೇಗೆ ಮರೆಯಲು ಸಾಧ್ಯ!??



ಲೀಲಾವತಿ ವಿಜಯಕುಮಾರ
ಹ.ಬೊ.ಹಳ್ಳಿ

ಆದರೆ ಅಲ್ಲೊಂದು ಮಹತ್ ಕಾರ್ಯಗಳು ಶ್ರೀರಾಮರಿಂದಲೇ ಆಗಬೇಕಿತ್ತು ಎಂದು, ಈಗ ನಾವು ರಾಮಾಯಣ ತಿಳಿದುಕೊಳ್ಳುವಾಗ ಗೊತ್ತಾಗುವುದು. ಕಾರಣ ಅಲ್ಲಿ ಜಯ–ವಿಜಯರ ಶಾಪ ವಿಮೋಚನೆಯಾಗಬೇಕಿತ್ತು. ಅನೇಕ ವಿದ್ವಂಸಕರ, ದುರಳ ರಾವಣರ ಸಂಹಾರವಾಗಬೇಕಿತ್ತು. ಶಿಲೆಯಾಗಿ ಬದಲಾಗಿದ್ದ ಅಹಲ್ಯೆಯು ಆ ಶಿಲೆಯಿಂದ ವಿಮೋಚನೆ ಪಡೆಯಬೇಕಿತ್ತು. ಶಬರಿಗೆ ರಾಮರ ದರ್ಶನವಾಗಿ ಮೋಕ್ಷದ ಹಾದಿಯೆಡೆಗೆ ಸಾಗಬೇಕಿತ್ತು. ಅದೇ ಅಲ್ಲವೇ, ಶ್ರೀರಾಮ ರೂಪಿ ಭಗವಂತನಿಗೆ ಮಾತ್ರ ಮೀಸಲಾದ ವಿಭೂತಿಯೋಗ!! ಶ್ರೀ ರಾಮ ಸ್ವರೂಪದಲ್ಲಿದ್ದ ಭಗವಂತನಲ್ಲದೇ, ಆ ಮಹತ್ ಕಾರ್ಯಗಳು ಬೇರೆಯವರಿಗೆ ಸಾಧ್ಯವಿಲ್ಲವಷ್ಟೇ. ಹಾಗಾಗಿಯೇ ಇದು ಕೇವಲ ನೆಪವಾಗಿರಬಹುದು. ಮಹಾರಾಜನಾದ ಶ್ರೀರಾಮನು ತಾನು ವನವಾಸದಲ್ಲಿರಲಿ ಅಥ್ವಾ ಅರಮನೆಯಲ್ಲಿರಲಿ, ಅವರಿಂದ ಪ್ರಜೆಗಳಿಗೆ ಸದಾ ಶ್ರೀ ರಕ್ಷೆ, ನಂಬಿದ ಪ್ರಜೆಗಳ ಸಂಕಟಗಳಿಗೆ ವಿಮೋಚನೆ ಇರುವುದು ಎಂಬುದಕ್ಕೆ ಇದೂ ಕಾರಣವಾಯಿತು.

ನಂತರ ವನವಾಸ ಮುಗಿಸಿ ಬಂದ ಅಯೋದ್ಯೆಗೆ ವಾಪಾಸಾದ ಶ್ರೀರಾಮರ ಸುಗ್ರೀವ ಹನುಮಾದಿಯಾದ ಪರಿವಾರಕ್ಕೆ ಸಿಕ್ಕಿದ್ದು ಎಂದಿಲ್ಲದ ವೈಭವ ವೈಭೋಗದ ಸ್ವಾಗತವೇ!! ಜನರ ಕಾಯುವಿಕೆಯು, ಅವರ ಆನಂದ ಹೇಗಿತ್ತು ಎಂದರೆ, ರಾಮನಿಗಾಗಿ ಶಬರಿಯಂತೆ ಕಾದಿದ್ದ ಅಯೋಧ್ಯಾ ಪ್ರಜೆಗಳ, ಆನಂದಭಾಷ್ಪದ ಕಂಬನಿಯೇ ಶ್ರೀರಾಮಭದ್ರರಿಗೆ ಅಭಿಷೇಕವಾಯಿತು. ಆ ಭಾವೋದ್ಘರ್ಷದ ಭಾವುಕ ಅನುಭೂತಿಯನ್ನು ನಿನ್ನೆಯ ಪ್ರಾಣಪ್ರತಿಷ್ಠಾನದಲ್ಲಿ ಸಮಯದಲ್ಲಿ ನನ್ನಂತೆ ಎಲ್ಲರಲ್ಲೂ ಆ ಆನಂದಭಾಷ್ಪದ ಅನುಭೂತಿ ಆಗಿಯೇ ಇರುವುದು. ಬಹುಶಃ ವನವಾಸದಿಂದ ಮರಳಿದ ರಾಮರನ್ನು ಮರಳಿ ನೋಡಿದ ಕೋಸಲ ಪ್ರಜೆಗಳಿಗೆ ಆಗಿದಂತಹ ಭಾವವೇ, ಪ್ರಾಣಪ್ರತಿಷ್ಠಾನ ಸಮಯದಲ್ಲಿ ಆಗಿತ್ತು ಎಂದರೆ ಅತಿಶಯೋಕ್ತಿಯಲ್ಲವಷ್ಟೇ!!

"ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ"ಎಂದು ಮಾತೃಭೂಮಿಯ ಮಹತ್ವ ತಿಳಿಸಿದ ಶ್ರೀರಾಮರು, ಸಮೃದ್ಧವಾಗಿದ್ದಂತಹ ಲಂಕೆಯ ಅಧಿಕಾರವನ್ನು ನಯವಾಗಿ ತಿರಸ್ಕರಿಸಿ, ವಿಭೂಷಣನಿಗೆ ಅಲ್ಲಿನ ರಾಜನನ್ನಾಗಿಸಿ, ತಾಯ್ನಾಡಿಗೆ ಮರಳಿದ ಶ್ರೀರಾಮರು, ಅಯೋಧ್ಯೆಗೆ ಮಾತ್ರವಲ್ಲ, ಇಡೀ ಜಗತ್ತಿಗೆ ಸುಂದರ, ಸಂತಸಮಯ ಆಳ್ವಿಕೆಯನ್ನು ಮಾದರಿಯಾಗಿಸಿದವರು. ಆ ಆಳ್ವಿಕೆಯ ಕೇಂದ್ರಬಿಂದುವಾಗಿದ್ದ ಅಯೋದ್ಯೆಯು, ಪ್ರತಿಯೊಬ್ಬರೂ ಹೀಗೆಯೇ ತನ್ನ ನಾಡು ಇರಬೇಕೆಂದು ಬಯಸುವ, ಗಾಂಧೀಜಿ ಅವರ ಕನಸಾಗಿದ್ದ ಆನಂದಮಯ "ರಾಮರಾಜ್ಯ"ಕ್ಕೆ ಮಾದರಿಯಾಗಿತ್ತು.

ಇಂತಹ ಭವ್ಯ ಅಯೋಧ್ಯೆಯು ಮತ್ತೊಮ್ಮೆ 16 ನೇ ಶತಮಾನದಲ್ಲಿ ಕರಾಳ ದಿನಗಳನ್ನು ಕಂಡಿತು. ನಂತರ ಅನೇಕ ಮಹನೀಯರ ಅವಿರತ ಪ್ರಯತ್ನದ ಫಲವಾಗಿ, ನಮಗೆ ಮತ್ತೆ ಅಯೋಧ್ಯೆಯ ವೈಭವವೂ ಕಣ್ತುಂಬಿಕೊಂಡಿದೆ. ಸನಾತನ ಭಾರತದ ರಾಜ್ಯ(ಜನಪದ)ಕೋಸಲ ಜನಪದದಂತೆ, ಭಾರತೀಯ ನಿವಾಸಿಗಳಾಗಿ ನಾವು, ದಿನಾಂಕ 22.01.2024ರ ಮೇಷ ಲಗ್ನ ಮೃಗಶೀರ ನಕ್ಷತ್ರದಲ್ಲಿ ನಡೆದ, ಶ್ರೀ ರಾಮ ಮಂದಿರದ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವವನ್ನು, ತ್ರೇತಾಯುಗದ ಅಯೋಧ್ಯೆಯ ಸಡಗರ–ಸಂಭ್ರಮ, ವೈಭವವನ್ನು ಮತ್ತೆ ಮತ್ತೆ ಕಣ್ತುಂಬಿಕೊಳ್ಳುತ್ತಿದ್ದೇವೆ. ಹೀಗೆಯೇ ಇದ್ದೀರಬಹುದಾ!? ಆಗಿನ ಆಯೋಧ್ಯೆಯ ನಿವಾಸಿಗಳ ಸಂಭ್ರಮ! 'ಈಗಿನಂತೆ ಇಡೀ ದೇಶದಲ್ಲಿ ಸಂಭ್ರಮ ತುಂಬಿ ತುಳುಕುತ್ತಿರಬೇಕು, ನಾವೂ ಆ ಸಮಯ ಭಾಗಿಯಾಗಿರಬೇಕು', ಎನ್ನುವ ನಮ್ಮ ಮನದ ಆಲೋಚನೆಗಳಿಗೆ ನಾವೇ ಸಾಕ್ಷಿಭೂತವಾಗುತ್ತಿದ್ದೇವೆ. ಅಯೋಧ್ಯೆಯ ಮಣ್ಣಿನ ಪ್ರತಿ ಕಣಕಣವು ಈ ಅಭೂತಪೂರ್ವ ಸಂಭ್ರಮವನ್ನು ಕಣ್ತುಂಬಿಕೊಳ್ಳುತ್ತಿದೆ. ಇದೇ ಕ್ಷಣಗಳಿಗೆ ಕಾಯ್ದು ಕುಳಿತಿರುವ ಶಬರಿಯಂತೆ, ಶ್ರೀ ರಾಮಚಂದ್ರನ ಪ್ರತಿ ಪ್ರಜೆಯೂ ಕಣ್ತುಂಬಿಕೊಂಡು, ವರ್ಣಿಸಲಾಗದ ಆನಂದದ ಭಾವೋದ್ವೇಗದಿಂದ ಕಂಬನಿ ತುಂಬಿ ಕಣ್ತುಂಬಿಕೊಳ್ಳುವಂತೆ!!

# ಅಜ್ಜನ ಜಾತ್ರೆಯಲ್ಲಿ ಜನ ಸಾಗರ

**ಅಜ್ಜನ ಜಾತ್ರೆಗೆ ಬನ್ನಿ ಎನ್ನುವ ಮೂರು ಪದಗಳು ಲಕ್ಷಾಂತರ ಹೃದಯ ತಲುಪಿವೆ ಎಂದ ಗವಿಮಠದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮಿಗಳು ಮೈಸೂರಿನ ಸುತ್ತೂರು ಶ್ರೀಗಳಿಂದ ರಥೋತ್ಸವಕ್ಕೆ ಚಾಲನೆ । ಕೊಪ್ಪಳ ಗವಿಸಿದ್ದೇಶ್ವರ ಶ್ರೀಗಳು ಈ ಭಾಗದ ಜನರ ಕಾಮದೇನು ಡಿಸಿಎಂ ಡಿ.ಕೆ.ಶಿವಕುಮಾರ್ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಪಾಲ್ಗೊಂಡು ಪಲ್ಲಕ್ಕಿಗೆ ಹೆಗಲು ಕೊಟ್ಟು ಗಮನ ಸೆಳೆದರು**

■ **ಹಂಪಿ ಟೈಮ್ಸ್ ಕೊಪ್ಪಳ**

ಲಕ್ಷಾಂತರ ಭಕ್ತರು ಕಾತುರದಿಂದ ಕಣ್ತುಂಬಿಕೊಳ್ಳಲು ಕಾಯುತ್ತಿದ್ದ ದಕ್ಷಿಣ ಭಾರತದ ಕುಂಭಮೇಳ ಖ್ಯಾತಿಯ 208 ನೇ ವರ್ಷದ ಗವಿಸಿದ್ದೇಶ್ವರ ಮಹಾ ರಥೋತ್ಸವ ಶನಿವಾರ ಅದ್ಧೂರಿಯಾಗಿ ಜರುಗಿತು. ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಮೈಸೂರಿನ ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ ಅವರು ಬಸವಪಟ ಆರೋಹಣ ಮಾಡುವ ಮೂಲಕ ಚಾಲನೆ ನೀಡಿದರು. ಭಕ್ತರ ಜಯಘೋಷ, ಕರತಾಡನ ಮಧ್ಯೆ ರಥೋತ್ಸವ ಸಾಂಗವಾಗಿ ಪಾದಗಟ್ಟೆಯವರೆಗೆ ಮುಟ್ಟಿ ಬಳಿಕ ಮೂಲ ಸ್ಥಾನಕ್ಕೆ ಮರಳಿತು. ಜಾತ್ರೆಯಲ್ಲಿ ಗವಿಶ್ರೀಗಳು ಬಾಳೆ ಹಣ್ಣು ಎಸೆಯದಂತೆ ಮನವಿ ಮಾಡಿದ್ದರಿಂದ ಭಕ್ತಾಧಿಗಳು ಉತ್ತತ್ತಿ ಎಸೆದು ಪುನೀತರಾದರು. ಎಂಟು ಲಕ್ಷಕ್ಕೂ ಅಧಿಕ ಭಕ್ತರು ಭಾಗಿಯಾಗಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ಎಸ್ ತಂಗಡಗಿ, ಶಾಸಕರಾದ ರಾಘವೇಂದ್ರ ಹಿಟ್ನಾಳ್, ಜನಾರ್ಧನರಡ್ಡಿ, ಹೇಮಲತಾ ನಾಯಕ, ಸಂಸದ ಕರಡಿ ಸಂಗಣ್ಣ, ಐಜಿಪಿ ಬಿ.ಎಸ್.ಲೋಕೇಶ ಸೇರಿದಂತೆ ಇತರರು ಇದ್ದರು.



ಚಿತ್ರ: ನಾಗರಡ್ಡಿ ಹಗಡಲಿ

# ಗೈರಾದರೆ ಸಸ್ಪೆಂಡ್ ಗ್ಯಾರಂಟಿ

**ಜಿ.ಪಂ. ಸಿಇಒ ಸದಾಶಿವ ಪ್ರಭು ಪಿಡಿಓಗಳಿಗೆ ಖಡಕ್ ವಾರ್ನಿಂಗ್ । ಪ್ರಗತಿ ಪರಿಶೀಲನ ಸಭೆ**

■ **ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕು ಪಂಚಾಯಿತಿ ಆವರಣದಲ್ಲಿರುವ ಸಾಮರ್ಥ್ಯ ಸೌಧದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನ ಸಭೆಯಲ್ಲಿ ಅಭಿವೃದ್ಧಿ ಅಧಿಕಾರಿಗಳು ಫೀಲ್ಡ್ ವಿಜಿಟ್ ನೆಪವೊಡ್ಡಿ ಪಂಚಾಯಿತಿಗಳಿಗೆ ಹೋಗದೆ ಗೈರಾದರೆ ಸಸ್ಪೆಂಡ್ ಮಾತ್ರ ಗ್ಯಾರಂಟಿ ಎಂದು ವಿಜಯನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಸದಾಶಿವ ಪ್ರಭು ಅವರು ಪಿಡಿಓಗಳಿಗೆ ಎಚ್ಚರಿಸಿದರು.

ಗ್ರಾಮ ಪಂಚಾಯಿತಿಗಳಲ್ಲಿ ಪಿಡಿಓ ಅವರಿಂದ ಹಿಡಿದು ಡಿ–ಗ್ರೂಪ್‌ನ ಜವಾನರ ತನಕ ಎಲ್ಲರೂ ಇ–ಹಾಜರಾತಿ ಕಡ್ಡಾಯವಾಗಿ ಹಾಕಬೇಕು. ಬೆಳಗ್ಗೆ ಶೀಘ್ರವಾಗಿಯೂ ನೀವು ಕೆಲಸದ ಸ್ಥಳಗಳಿಗೆ ಹೋದರೂ ಕಚೇರಿಗೆ ಬಂದು ಇ–ಹಾಜರಾತಿ ಹಾಕಬೇಕು. ಇದರ ಆಧಾರದ ಮೇಲೆ ವೇತನ ನೀಡಲಾಗುತ್ತಿದೆ. ಪಿಡಿಒಗಳು ಕಾಮಗಾರಿ ಸೇರಿದಂತೆ ವಿವಿಧ ಕಾರಣಗಳಿಗೆ ಸ್ಥಳ ಭೇಟಿ ಎಂದು ನಾನಾ ಸಬೂಬು ನೀಡಿ ಪಂಚಾಯಿತಿಗಳಿಗೆ ಹೋಗದೆ ಗೈರಾದರೆ ಶಿಸ್ತು ಕ್ರಮ ಗ್ಯಾರಂಟಿ. ಉಳಿದ ಪಿಡಿಒಗಳಿಗೂ ಈ ಬಗ್ಗೆ ಪಾಠವೂ ಆಗುತ್ತದೆ ಎಂದು ಖಡಕ್ಕಾಗಿ ಎಚ್ಚರಿಸಿದರು.

ಅಣಜಿಗೆರೆ, ಹಿರೇಮೇಗಳಗೆರೆ, ಮಾಡ್ಲಗೆರೆ, ಚಿಗಟೇರಿ, ಹಾರಕನಾಳು, ಕಡತಿ, ಪುಣಭಗಟ್ಟ, ಗುಂಡುಗತ್ತಿ, ದುಗ್ಗಾವತಿ ಸೇರಿದಂತೆ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಇವೆ. ಕಾಮಗಾರಿಗಳು ಸಹ ಮಂದಗತಿಯಲ್ಲಿ ಸಾಗುತ್ತಿವೆ ಎಂದು ಪಿಡಿಒಗಳು ತಿಳಿಸಿದಾಗ ಎಇಇ ಕಿರಣ್ ಮಾತನಾಡಿ, ತಾಂತ್ರಿಕ ಸಮಸ್ಯೆ, ಒಎಚ್‌ಟಿ ನಿರ್ಮಿಸಲು ಸ್ಥಳೀಯರ ತಕರಾರು ಇವೆ. ಹೀಗಾಗಿ ಜೆಜೆಎಂ ಸೇರಿದಂತೆ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳು ಶೀಘ್ರ ಮುಗಿಸಲು ಸಮಸ್ಯೆಯಾಗುತ್ತಿದೆ. ನಾವೂ ಕೂಡ ಸ್ಥಳಗಳಿಗೆ ಭೇಟಿ ನೀಡುತ್ತಿದ್ದೇವೆ. ಆದಷ್ಟು ಬೇಗ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಇನ್ನೂ ಅಣಜಿಗೆರೆ ಗ್ರಾಪಂ ವ್ಯಾಪ್ತಿಯ ಮಾದಿಹಳ್ಳಿಯಲ್ಲಿ ಜೆಜೆಎಂ ಕಾಮಗಾರಿ ನಡೆಯುತ್ತಿದ್ದ ವೇಳೆ ಜೆಸಿಬಿ ಮೂಲಕ ನೆಲ ಅಗೆಯುವಾಗ ಸದ್ಯ ನೀರು ಪೂರೈಸುವ ಪೈಪ್ ಹೊಡೆದಿದೆ. ಈ ಬಗ್ಗೆ ಸೆಕ್ಷನ್ ಅಧಿಕಾರಿಗಳಿಗೆ ಎರಡು ತಿಂಗಳ ಹಿಂದೆ ತಿಳಿಸಿದ್ದರೂ ಕ್ರಮಕ್ಕೆ ಮುಂದಾಗಿಲ್ಲ ಎಂದು ಪಿಡಿಒ ಉಮೇಶ ಸಭೆಯಲ್ಲಿ ತಿಳಿಸಿದಾಗ ಗರಂ ಆದ ಸಿಇಒ ಅವರು ಸೆಕ್ಷನ್ ಅಧಿಕಾರಿಗಳು ನಿಮ್ಮ ಮಾತು ಕೇಳಿದಿದ್ದರೆ ಎಇಇ, ಇಒ ಅವರಿಗೂ ತಿಳಿಸಬೇಕು. ಇಷ್ಟು ದಿನ ಕಾಯುವುದರಲ್ಲಿ ಅರ್ಥವಿಲ್ಲ. ಇನ್ನೂ ಪೈಪ್‌ಗಳು ಹೊಡೆದಾಗ 24 ತಾಸಿನೊಳಗೆ ಅದನ್ನು ಸರಿಪಡಿಸುವುದು ಸಂಬಂಧಪಟ್ಟ ಇಲಾಖೆಯ ಜವಾಬ್ದಾರಿ ಎಂದು ತಿಳಿಸಿದರು.



ಆದಷ್ಟು ಶೀಘ್ರ ಪ್ರಗತಿ ಸಾಧಿಸಬೇಕು ಮಹಾತ್ಮ ಗಾಂಧಿ ರಾಷ್ಟ್ರಿಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಪಂಚಾಯತ್ ರಾಜ್ ಇಲಾಖೆಯ ನಾನಾ ವಿಷಯಗಳು, ಜಲ ಜೀವನ ಮಿಷನ್, ಸ್ವಚ್ಛ ಭಾರತ ಮಿಷನ್, ಯೋಜನಾ ಶಾಖೆ, ಲೆಕ್ಕ ಶಾಖೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ತಾಲೂಕು ನರೇಗಾ ಸಹಾಯಕ ನಿರ್ದೇಶಕರಾದ ಯು. ಎಚ್.ಸೋಮಶೇಖರ್, ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ವೀರಣ್ಣ ಲಕ್ಕಣ್ಣನವರ್, ತಾಲೂಕು ಯೋಜನಾಧಿಕಾರಿ ನವೀನ್ ಕುಮಾರ್, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆಯ ಎಇಇ ಕಿರಣ್, ತಾಪಂ ವ್ಯವಸ್ಥಾಪಕ ದಾದ ಖಲೀಲ್ ಸಾಬ್, ಎಲ್ಲ ಪಂಚಾಯಿತಿಗಳ ಪಿಡಿಒಗಳು, ನರೇಗಾ ಹಾಗೂ ತಾಪಂ ಸಿಬ್ಬಂದಿ ಇದ್ದರು.

**ಸ್ವಂತ ಬೋರ್‌ವೆಲ್‌ಗಳು ಫೇಲಾದರೆ ರೈತರ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಿರಿ. ಇವು ಸಿಗದಿದ್ದರೆ ಟ್ಯಾಂಕರ್ ಮೂಲಕ ನೀರು ಪೂರೈಸಬೇಕು. ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಧರ ನಿಗದಿಯನ್ನು ಕಡ್ಡಾಯವಾಗಿ ಸಿಇಒ ಗಮನಕ್ಕೆ ತಂದು ಅನುಮತಿ ಪಡೆಯಬೇಕು. ಜಿಲ್ಲೆಯ ವಿವಿಧ ಹಳ್ಳಿಗಳಲ್ಲಿ ನೋಡಿದಂತೆ ಕೆಲ ನಲ್ಲಿಗಳಿಗೆ ಟ್ಯಾಪ್‌ಗಳೇ ಇರುವುದಿಲ್ಲ. ಎಲ್ಲೇ ಟ್ಯಾಪ್ ಕಳಚಿದರೂ ಅದನ್ನ ಒಂದೆರಡು ಸಲ ನೀರಗಂಟಿಗಳೇ ಸರಿಪಡಿಸಬೇಕು. ಸಂಬಂಧಪಟ್ಟ ಮನೆಯವರು ಅರ್ಥ ಮಾಡಿಕೊಳ್ಳದಿದ್ದರೆ ಅವರ ವಿರುದ್ದ ಕೇಸ್ ದಾಖಲಿಸಲಾಗುವುದು.**


**ಏಳೆಂಟು ಜನ ಪಿಡಿಒಗಳು ದಾವಣಗೆರೆ ಯಿಂದ ಹೋಗಿ ಬಂದು ಕೆಲಸ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಸರಿಯಾದ ಸಮಯಕ್ಕೆ ಪಂಚಾಯಿತಿಗಳಿಗೆ ಹಾಜರಾಗದಿದ್ದರೆ ಸರ್ಕಾರಿ ಕೆಲಸಗಳು ಹಾಗೂ ಜನರ ಸೇವೆಗಳಿಗೂ ತೊಂದರೆಯಾಗುತ್ತಿದೆ. ಶೀಘ್ರದಲ್ಲೇ ಪಂಚಾಯಿತಿ ಇರುವ ತಾಲೂಕಿನ ಕೇಂದ್ರ ಸ್ಥಾನ ಅಥವಾ ಪಂಚಾಯಿತಿಗಳ ಅಕ್ಕ–ಪಕ್ಕದ ಪಟ್ಟಣಗಳಲ್ಲಾದರೂ ವಾಸವಾಗಿರುವುದು ಕಡ್ಡಾಯ. ಇದನ್ನು ನಿರ್ಲಕ್ಷ ಮಾಡಿ ಕಚೇರಿಗಳಿಗೆ ತಡವಾಗಿ ಬಂದರೆ ಸಸ್ಪೆಂಡ್ ಕಡ್ಡಾಯ ಎಂದು ಸಿಇಒ ಖಡಕ್ ಸೂಚನೆ ನೀಡಿದರು.**

# ಸಾಮಾಜಿಕ ಕಳಕಳಿಗೆ ಗವಿಸಿದ್ದೇಶ್ವರ ಜಾತ್ರೆ ಮಾದರಿ: ಡಿ.ಕೆ.ಶಿವಕುಮಾರ

■ **ಹಂಪಿ ಟೈಮ್ಸ್ ಕೊಪ್ಪಳ**

ಶ್ರೀ ಗವಿಸಿದ್ದೇಶ್ವರ ಜಾತ್ರೆಯು ಸಾಮಾಜಿಕ ಕಳಕಳಿಗೆ ಮಾದರಿಯಾಗಿದೆ ಎಂದು ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಅವರು ಹೇಳಿದರು.

ದಕ್ಷಿಣ ಭಾರತದ ಕುಂಬಮೇಳ ಎಂದೇ ಪ್ರಸಿದ್ದಿ ಪಡೆದಿರುವ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ–2024 ಪ್ರಯುಕ್ತ ಜನವರಿ 27ರಂದು ಜರುಗಿದ ಮಹಾರಥೋತ್ಸವದಲ್ಲಿ ಪಾಲ್ಗೊಳ್ಳಲು ಜಿಲ್ಲೆಗೆ ಆಗಮಿಸಿದ ಹಿನ್ನೆಲೆಯಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ಕೊಪ್ಪಳದ ಗವಿಮಠದ ಇತಿಹಾಸವನ್ನು ಕೇಳಿದ್ದೇನೆ. ಗವಿಮಠಕ್ಕೆ ಎರಡು ಮೂರು ಬಾರಿ ಭೇಟಿ ಕೊಟ್ಟಿದ್ದೇನೆ. ಇಷ್ಟು ದೊಡ್ಡ ಜಾತ್ರೆಯಲ್ಲಿ ಪಾಲ್ಗೊಳ್ಳಬೇಕು ಎಂಬ ದೊಡ್ಡ ಅಭಿಲಾಶೆ, ಉತ್ಸಾಯ ಮತ್ತು ನಂಬಿಕೆ ಇತ್ತು. ಈ ವರ್ಷ ಜಾತ್ರೆಯಲ್ಲಿ ಪಾಲ್ಗೊಳ್ಳಲು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳೀಯ ಶಾಸಕರು ಸೇರಿ ಹಲವರಿಂದ ನನಗೆ ಒತ್ತಾಯವಿತ್ತು. ಅದರಂತೆ ರಥೋತ್ಸವದಲ್ಲಿ ಪಾಲ್ಗೊಂಡಿರುವೆ ಎಂದರು.



ಇಂದಿನ ಶ್ರೀಗಳು ಶ್ರೀಮಠ ಜವಬ್ದಾರಿ ತೆಗೆದುಕೊಂಡಾಗಿನಿಂದ ಪ್ರತಿವರ್ಷ ಹೊಸ–ಹೊಸ ಆಚಾರ ವಿಚಾರಗಳಿಗೆ ಹೆಜ್ಜೆ ಹಾಕುತ್ತಿದ್ದಾರೆ. ಸಾಮಾಜಿಕವಾದ ಬದಲಾವಣೆಗೂ ಸಹ ಹೆಚ್ಚಿನ ಶಕ್ತಿ ತುಂಬುತ್ತಿದ್ದಾರೆ. ಅದಕ್ಕೆ ಸರ್ಕಾರದಿಂದ ಪ್ರೋತ್ಸಾಹಿಸಲು ಸರ್ಕಾರದ ಪ್ರತಿನಿಧಿಯಾಗಿ ನಾನು ಬಂದಿದ್ದೇನೆ. ಗವಿಸಿದ್ದೇಶ್ವರ ಜಾತ್ರಾ ಮಹೋತ್ಸವವು ವಿಶೇಷವಾದ ಈ ಭಾಗದ ಧಾರ್ಮಿಕ ಚರಿತ್ರೆಯುಳ್ಳ ಒಂದು ಜಾತ್ರೆಯಾಗಿದೆ. ಇದರಲ್ಲಿ ಜನರ ಭಾವನೆ, ಅವರ ನಂಬಿಕೆಗೆ ನಾವು ಜೊತೆಗಿದ್ದೇವೆ ಎಂದು ಹೇಳಿದರು.

ನವಲಿ ಸಮನಾಂತರ ಜಲಾಶಯಕ್ಕೆ ಸರ್ಕಾರ ಬದ್ಧ: ತುಂಗಭದ್ರ ಜಲಾಶಾಯದ ಹೂಳು ನಿರ್ವಹಣೆಯ ಪರ್ಯಾಯವಾಗಿ ಕೊಪ್ಪಳ ಜಿಲ್ಲೆಯ ನವಲಿಯಲ್ಲಿ ಸಮನಾಂತರ ಜಲಾಶಯ ನಿರ್ಮಾಣಕ್ಕೆ ಸರ್ಕಾರವು ಬದ್ಧವಾಗಿದೆ. ಈ ಕುರಿತು ಆಂದ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯದ ಮುಖ್ಯಮಂತ್ರಿಗಳಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಮೂರು ಜಿಲ್ಲೆಗಳ ಸಚಿವರು ಸೇರಿ ತೀರ್ಮಾನ ಕೈಗೊಂಡು ಆಂದ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯದ ಸಚಿವರಿಗೆ ಪತ್ರ ಬರೆಯುತ್ತೇವೆ. ತುಂಗಭದ್ರ ಜಲಾಶಾಯದಲ್ಲಿನ ಹೂಳಿನಿಂದಾಗ ನಾವು 30ಕ್ಕೂ ಹೆಚ್ಚು ಟಿಎಂಸಿ ನೀರನ್ನು ಕಳೆದುಕೊಳ್ಳುತ್ತಿದ್ದೇವೆ. ತುಂಗಭದ್ರ ಜಲಾಶಯದ ಹೂಳು ತೆಗೆಯುವ ಬದಲು ಸಮನಾಂತರ ಜಲಾಶಯ ಕಟ್ಟುವುದು ಸೂಕ್ತವಾಗಿದೆ. ಸಮನಾಂತರ ಜಲಾಶಯ ನಿರ್ಮಾಣದಿಂದ ಮೂರು ರಾಜ್ಯಗಳಿಗೂ ಅನುಕೂಲ ವಾಗಲಿದೆ. ಈ ಭಾಗದ ಜನರ ಅನುಕೂಲಕ್ಕಾಗಿ ನಮ್ಮ ಬದ್ಧತೆಯನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತೇವೆ ಎಂದರು.

ನವಲಿ ಸಮನಾಂತರ ಜಲಾಶಯ ನಿರ್ಮಾಣದ ಬೇಡಿಕೆ ಬಳಷ್ಟು ವರ್ಷಗಳಿಂದ ಇದೆ. ಈ ಬಗ್ಗೆ ಮುಖ್ಯಮಂತ್ರಿಗಳು ಅನೇಕ ಬಾರಿ ವಿಧಾನಸಭೆಯಲ್ಲಿ ಪ್ರಸ್ತಾಪನೆ ಮಾಡಿದ್ದಾರೆ. ಇದರ ಬಗ್ಗೆ ಈ ಹಿಂದೆಯೂ ಸಹ ಬಹುದೊಡ್ಡ ಚರ್ಚೆ ನಡೆದಿತ್ತು. ಈಗ ಅದನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ಕೆಲಸ ಮಡುತ್ತೇನೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ, ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ್, ಡಿಸಿ ನಲಿನ್ ಅತುಲ್ ಸೇರಿದಂತೆ ಮತ್ತಿತರರಿದ್ದರು.

# ಕಾಂತರಾಜ್ ವರದಿ ಜಾರಿಗಾಗಿ ಬೃಹತ್ ಸಮಾವೇಶಕ್ಕೆ ಬೆಂಬಲ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಚಿತ್ರದುರ್ಗದ ಮಾದರ ಚೆನ್ನಯ್ಯ ಪೀಠದ ಮೈದಾನದಲ್ಲಿ ಕರ್ನಾಟಕ ಶೋಷಿತರ ಸಮುದಾಯಗಳ ಮಹಾ ಒಕ್ಕೂಟದಿಂದ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಆ ಸಮಾವೇಶಕ್ಕೆ ತಾಲೂಕಿನಿಂದ ಅಪಾರವಾದ ಬೆಂಬಲದೊಂದಿಗೆ ನಾವು ಪಾಲ್ಗೊಳ್ಳುವ ಮೂಲಕ ಸಮಾವೇಶದ ಆಶಯದಂತೆ ಎಚ್.ಕಾಂತರಾಜ್ ವರದಿ ಜಾರಿಗೊಳಿಸಬೇಕೆಂದು ಆಗ್ರಹಿಸಲಾಗುವುದು ಎಂದು ರಾಜ್ಯ ಕುರುಬ ಸಂಘದ ನಿರ್ದೇಶಕ ಎಂ.ಮರಿರಾಮಪ್ಪ ತಿಳಿಸಿದರು.

ಪಟ್ಟಣದ ಕೆ.ಎಂ.ಎಫ್ ಅಧ್ಯಕ್ಷ ಎಸ್.ಭೀಮಾನಾಯ್ಕ್ ಅವರ ನಿವಾಸದಲ್ಲಿ ಕರೆಯಲಾಗದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ಈ ಸಮಾವೇಶಕ್ಕೆ ಹೊರಡುವವರಿಗಾಗಿ ಕ್ಷೇತ್ರಧ್ಯಂತ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಸಾಕಷ್ಟು ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಳ್ಳಬೇಕು ಎಂದರು. ರಾಜ್ಯ ಸರ್ಕಾರ ಜಾತಿ ಸಮೀಕ್ಷೆಯನ್ನು ಜಾರಿಗೊಳಿಸಬೇಕು ಕಾಂತರಾಜ್‌ವರದಿ ಅನುಷ್ಠಾನಗೊಳ್ಳಲೇ ಬೇಕು, ಹಿಂದುಳಿದ ವರ್ಗಗಳ ಜನತೆಯ ಕಲ್ಯಾಣಕ್ಕೆ ನ್ಯಾಯದೊರೆಯಬೇಕು. ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಸಮುದಾಯಗಳು ಸಮಾಜಮುಖಿಯಾಗಬೇಕು ಎಂದ ಅವರು, ಅಲ್ಪ ಸಂಖ್ಯಾತರರು ಮತ್ತು ಮಹಿಳೆಯರಿಗೂ, ಪ.ಜಾತಿ, ಪ.ಪಂಗಡದವರು ಸೇರಿದಂತೆ ಹಿಂದುಳಿದವರಿಗೆ ಮೀಸಳಾತಿ ಕಲ್ಪಿಸಬೇಕು ಎಂದರು.

ಈ ವೇಳೆ ಹಿರಿಯ ಮುಖಂಡರಾದ ಹೆಗ್ಡಾಳ್ ರಾಮಣ್ಣ, ಕೆ.ಮೈಲಾರಪ್ಪ, ಉಲವತ್ತಿ ಸೋಮಲಿಂಗಪ್ಪ, ಬ್ಲಾಕ್ ಅಧ್ಯಕ್ಷ ಗೋಣಿಬಸಪ್ಪ, ಡಿಸ್ ಮಂಜುನಾಥ, ಬಾಳಪ್ಪ, ಸೆರೆಗಾರ್ ಹುಚ್ಚಪ್ಪ, ಬಾಲಕೃಷ್ಣಬಾಬು, ರಾಘವೇಂದ್ರ ಮತ್ತಿತರರು ಇದ್ದರು. ಹಗರಿಬೊಮ್ಮನಹಳ್ಳಿ ಪಟ್ಟಣದ ಕೆ.ಎಂ.ಎಫ್ ಅಧ್ಯಕ್ಷ ಭೀಮಾನಾಯ್ಕ್ ಅವರ ನೀವಾಸಲ್ಲಿ ಕರೆಯಲಾಗಿದ್ದ ಪತ್ರಿಕಾ ಗೋಷ್ಠಿಯ ಬಳಿಕ, ಚಿತ್ರದುರ್ಗದಲ್ಲಿ ನಡೆಯಲಿರುವ ಮಹಾ ಒಕ್ಕೂಟದ ಬೃಹತ್ ಸಮಾವೇಶದ ಕರಪತ್ರಗಳನ್ನು ಸಂಘಟಕರು ಪ್ರದರ್ಶಿಸಿದರು.

# ಕುಸ್ತಿ ಸ್ಪರ್ಧೆಗೆ ಹೆಸರು ನೋಂದಾಯಿಸಲು ಅವಕಾಶ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ರ ಪ್ರಯುಕ್ತ ಫೆ.3ರಂದು ಬೆಳಗ್ಗೆ 10 ಗಂಟೆಗೆ ಶ್ರೀವಿಜಯ ವಿದ್ಯಾರಣ ಪ್ರೌಢಶಾಲೆ ಮೈದಾನ ಹೊಸ ಮಲಪನಗುಡಿಯಲ್ಲಿ ರಾಜ್ಯ ಮಟ್ಟದ ಪುರುಷ ಹಾಗೂ ಮಹಿಳಾ ಮತ್ತು ಜಿಲ್ಲಾ ಮಟ್ಟದ ಪುರುಷ ಕುಸ್ತಿ ಸ್ಪರ್ಧೆ ಆಯೋಜನೆ ಮಾಡಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಕುಸ್ತಿಯ 4 ವಿಭಾಗದ ವಿವರಗಳು: ರಾಜ್ಯ ಮಟ್ಟದ ಪುರುಷರ ಕುಸ್ತಿ ಪಂದ್ಯಾವಳಿ, 57–65 ಕೆ.ಜಿ, 66–74 ಕೆಜಿ, 75–85 ಕೆಜಿ, 86 ಕೆ.ಜಿ ಮೇಲ್ಪಟ್ಟು. ಕುಸ್ತಿ ಪಂದ್ಯಾವಳಿಯನ್ನು ಸಂಘಟಿಸಲಾಗುವುದು. ರಾಜ್ಯ ಮಟ್ಟದ ಮಹಿಳೆಯರ ಕುಸ್ತಿ ಪಂದ್ಯಾವಳಿ 50 ಕೆ.ಜಿ, 51–54 ಕೆ.ಜಿ, 55–57 ಕೆ.ಜಿ, 58 ಕೆ.ಜಿ ಮೇಲ್ಪಟ್ಟು ಕುಸ್ತಿ ಪಂದ್ಯಾವಳಿಯನ್ನು ಸಂಘಟಿಸಲಾಗುವುದು. ಜಿಲ್ಲಾ ಮಟ್ಟದ ಪುರುಷರ ಕುಸ್ತಿ ಪಂದ್ಯಾವಯು 57–65 ಕೆ.ಜಿ, 66–74 ಕೆಜಿ, 75–85 ಕೆಜಿ, 86 ಕೆ.ಜಿ ಮೇಲ್ಪಟ್ಟು ಕುಸ್ತಿ ಪಂದ್ಯಾವಳಿಯನ್ನು ಸಂಘಟಿಸಲಾಗುವುದು.

ಸ್ಪರ್ಧೆಗೆ ಭಾಗವಹಿಸುವ ಕ್ರೀಡಾ ಪಟುಗಳು ಫೆ.03ರ ಬೆಳಗ್ಗೆ 08 ರಿಂದ 10 ಗಂಟೆಯೊಳಗೆ ತಮ್ಮ ಹೆಸರನ್ನ ನೋಂದಾಯಿಸಿಕೊಳ್ಳಬೇಕು. ಅಭ್ಯರ್ಥಿಗಳಿಗೆ ಪ್ರಥಮ ದ್ವಿತೀಯ ಬಹುಮಾನ ನೀಡಲಾಗುತ್ತದೆ. ಆಸಕ್ತ ಕ್ರೀಡಾಪಟುಗಳು ತಮ್ಮ ಆಧಾರ ಕಾರ್ಡ ಮತ್ತು ಬ್ಯಾಂಕ್ ಪಾಸ್‌ಬುಕ್ ಝರಾಕ್ಸ್ ಪ್ರತಿಯೊಂದಿಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 9972552385, 9164693882,9483480101 ಗೆ ಸಂಪರ್ಕಿಸಲು ತಿಳಿಸಿದೆ.

ಷರತ್ತುಗಳು: ಕುಸ್ತಿಪಟುಗಳಿಗೆ ವಯಸ್ಸಿನ ಮಿತಿ ಇರುವುದಿಲ್ಲ. ಜಿಲ್ಲಾ ಮಟ್ಟದ ಚಿತ್ತ ಕುಸ್ತಿಯಲ್ಲಿ ಭಾಗವಹಿಸುವ ಕುಸ್ತಿಪಟುಗಳು ವಿಜಯನಗರ ಜಿಲ್ಲೆಯವರೇ ಆಗಿರಬೇಕು., ಜಿಲ್ಲಾ ಮಟ್ಟದ ಕುಸ್ತಿಯಲ್ಲಿ ಕಡ್ಡಾಯವಾಗಿ ಆಧಾರ್ ಕಾರ್ಡ್ ತರಬೇಕು., ರಾಜ್ಯ ಮಟ್ಟದ ಕುಸ್ತಿಗಳು ಅಂಕಗಳ ಆಧಾರದ ಮೇಲೆ ನಡೆಯುತ್ತವೆ., ಕುಸ್ತಿಯ ಉಡುಪುಗಳು ಕಡ್ಡಾಯ., ರಾಜ್ಯ ಮಟ್ಟದ ಪುರುಷ/ಮಹಿಳೆ ಕುಸ್ತಿಯಲ್ಲಿ 04 ತೂಕದ ವಿಭಾಗದ ವಿಜೇತರಿಗೆ 1. ಹಂಪಿ ಕಿಶೋರ/ಹಂಪಿ ಕಿಶೋರಿ 2. ಹಂಪಿ ಕುಮಾರ/ ಹಂಪಿ ಕುಮಾರಿ 3. ಹಂಪಿ ಕೇಸರಿ/ಹಂಪಿ ಕೇಸರಿ 4. ಹಂಪಿ ಕಂಠೀರವ/ ಹಂಪಿ ಮಹಿಳಾ ಕಂಠೀರವ ಪ್ರಶಸ್ತಿಯನ್ನು ನೀಡಲಾಗುವುದು., ಸ್ಪರ್ಧಾಗಳು ಕುಸ್ತಿಯ ನಿಯಮಗಳಿಗೆ ತಕ್ಕಂತೆ ಶಿಸ್ತನ್ನು ಕಾಪಾಡಬೇಕು ಹಾಗೂ ನಿರ್ಣಾಯಕರ ತೀರ್ಮ ಅಂತಿಮವಾಗಿರುತ್ತದೆ ಎಂಬ ಷರತ್ತುಗಳನ್ನು ಪಾಲಿಸಬೇಕು ಎಂದು ತಿಳಿಸಿದೆ.

# ಕವಿತಾಸಿಂಗ್ ಸಾಧನೆಗೆ ಜನಮೆಚ್ಚುಗೆ



ಮೊದಲ ಪುಟದಿಂದ

ಕನ್ನಡ ಶಿಕ್ಷಕರು, ರಂಗಭೂಮಿ ಕಲಾವಿದ ಕೊಟ್ರೇಶ. ಜಿ.ಎಂ. ಕೆ ಸತ್ಯನಾರಾಯಣ ಮತ್ತು ಅನೇಕ ಸಮಾಜ ಸೇವಕರು ಮತ್ತು ಅನೇಕ ನಗರಸಭಾ ಸದಸ್ಯರನ್ನು ಸನ್ಮಾನಿಸಲಾಯಿತು.

ದಶಮಾನೋತ್ಸವ ಕಣ್ತುಂಬಿಕೊಳ್ಳಲು ಕಲ್ಯಾಣ ಮಂಟಪವು ಜನರಿಂದ ಕಿಕ್ಕಿರಿದದ್ದು ವಿಷೇಶವಾಗಿತ್ತು. ಯಾವುದೇ ರಾಜಕೀಯ ಪ್ರೇರಿತವಲ್ಲದ ಅಪೂರ್ವ ಕಾರ್ಯಕ್ರಮಕ್ಕೆ ಹೊಸಪೇಟೆ ನಗರ ಸಾಕ್ಷಿಯಾಯಿತು. ಕವಿತಾ ಈಶ್ವರ್‌ಸಿಂಗ್ ಜನರ ಅಭಿಮಾನಕ್ಕೆ ತಮ್ಮ ಹಿಂದಿನ ಕಷ್ಟಗಳನ್ನು ನನೆದು ಆನಂದಭಾಷ್ಪ ಸುರಿಸಿದರು. ಅಂಜಲಿ ಭರತನಾಟ್ಯ ಕಲಾಕೇಂದ್ರದ ತಂಡದ ನಾಟ್ಯ ಪ್ರದರ್ಶಿಸಿದರು. ಎಚ್.ಪಿ.ಕಲ್ಲಂಭಟ್ ನಿರೂಪಿಸಿದರು. ಇದಕ್ಕೂ ಪೂರ್ವ ನಗರದ ಅಪ್ಪು ಅಭಿಮಾನಿಗಳು ಅಪ್ಪು ವೃತ್ತದಲ್ಲಿ ಕೇಕ್ ಕತ್ತರಿಸಿ ಕವಿತಾಸಿಂಗ್ ಅವರ ಜನ್ಮದಿನದಂಗವಾಗಿ ಅಭಿಮಾನ ವ್ಯಕ್ತ ಪಡಿಸಿ ಶುಭಕೋರಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA